ಪಂಚಮ

ಸಂಪುಟ: 8 ಸೆಪ್ಟೆಂಬರ್ 20, 1984 ಬೆಲೆ 1-00 ಸಂಚಿಕೆ: 18

ಕ್ರಿ.ಪೂ. 1253ರಿಂದ ನಡೆದು ಬರುತ್ತಿರುವ ಒಲಂಪಿಕ್ಸ್ ಕ್ರೀಡೆ ಜಗತ್ತಿನ ಮನುಷ್ಯರಿಗೆ "ಮನುಷ್ಯರೆಲ್ಲ ಒಂದೇ" ಎಂದುಕೊಳ್ಳಲು ಉಳಿದಿರುವ ಒಂದೇ ಒಂದು ರೋಮಾಂಚನ. ಅಮೇರಿಕಾ ರಷ್ಯಾ ರಕ್ಕಸ ಶಕ್ತಿಗಳ ಹಣ ಬಣ್ಣ ಅಹಂಕಾರ ಪೈಪೋಟಿಯಲ್ಲಿ ಈ ಆಶೆಯೂ ಮಣ್ಣುಗೂಡಬಹುದೇನೋ. ಆದರೆ ಇದೆಲ್ಲವನ್ನೂ ಮೀರಿ ತಮ್ಮ ಕಪ್ಪು ಮೈಯೊಳಗೆ ದಟ್ಟ ಸಂಗೀತ ನೃತ್ಯ ಕಲೆ ಕಾಮ ಕ್ರೀಡೆಗಳನ್ನು ತುಂಬಿಕೊಂಡ ಜಗತ್ತಿನ ಅಸ್ಪೃಶ್ಯರು ನೀಗ್ರೋಗಳು ಮಾನವ ಕುಲದ ಭರವಸೆಯ ಚಿಗುರಾಗಿದ್ದಾರೆ. ಕಪ್ಪು ಒಂದೇ ಜಗತ್ತಿನ ಭರವಸೆಯಾಗಿದೆ.

ಒಲಂಪಿಕ್ಸ್ ಚರಿತ್ರೆ: ಕಪ್ಪು ಒಂದೇ ಮನುಕುಲದ ಭರವಸೆ

ಒಲಂಪಿಕ್ಸ್‌ನ ಗುರಿ: ವೇಗ, ಎತ್ತರ, ಶೌರ್ಯ. ಇವುಗಳ ಹುಡುಕಾಟ, ತಡಕಾಟ, ಪಡೆದೇ ಪಡೆಯಬೇಕೆಂಬ ಛಲ. ಅದಕ್ಕಾಗಿ ವರ್ಷಗಟ್ಟಲೆ ಅಹರ್ನಿಶಿ ದುಡಿತ. ಇದರ ಹಿಂದೆ ಒಂದು ಕಾವ್ಯಕ್ಕಾಗಿ ಉಳಿಯುವ ಎಲ್ಲಾ ಮನೋವ್ಯಾಪಾರಗಳ ಸಂಘರ್ಷಣೆ, ಧೀಮಂತಿಕೆ, ಹುಚ್ಚು ಸಾಹಸ, ಹಾಸ್ಯ, ವಿನೋದ, ಅದೃಷ್ಟ, ದುರಾದೃಷ್ಟ, ಆಶಯ, ನೋವು ನಲಿವು, ದುರಂತ. ಒಂದೇ, ಎರಡೆ ...ಆದರೂ ಮನಗುಂದದ ಹೋರಾಟ. ಪ್ರತಿಯೊಂದು ಒಲಂಪಿಕ್ಸ್‌ನಲ್ಲೂ ಕಾಲವನ್ನು ಸಂಕುಚಿತಗೊಳಿಸುವ ಪ್ರಯತ್ನ. 'ಲೋಕೈಕವೀರ' ನೆನಿಸಿಕೊಳ್ಳುವುದಕ್ಕೆ ಈಗ ಇರುವ ಒಂದೇ ಒಂದು ಅವಕಾಶ, ಒಂದೇ ಒಂದು ವೇದಿಕೆ.



1984ರ ಒಲಂಪಿಕ್ಸ್ ವೀರ ಕಾರ್ಲ್ ಲೂಯಿಸ್

ಒಲಂಪಿಕ್ಸ್‌ನ ಕಥೆ ಕ್ರಿ.ಪೂ. 1253ರಷ್ಟು ಹಳೆಯದು. ಅಂದಿನಿಂದ ಇಂದಿನವರೆಗೆ ಅದರ ಏಳು ಬೀಳುಗಳ ಕಥೆ ಮನುಷ್ಯನ ಚೇತನ, ಉತ್ಸಾಹಗಳು ನಡೆದುಬಂದ ದಾರಿಗೆ ಸಾಕ್ಷಿ. ಹರ್ಕ್ಯುಲಿಸ್ ಈ ಪಂದ್ಯಾಟಗಳನ್ನು ಪ್ರಾರಂಭಿಸಿದನೆಂದು ನಂಬಿಕೆ. ಒಲಂಪಿಯ ಸ್ಥಳದ ಹೆಸರು. ಪ್ರಾಕ್ತಶಾಸನತಜ್ಞರ ಪ್ರಕಾರ ಒಲಂಪಿಯ ಧಾರ್ಮಿಕ ಚಟುವಟಿಕೆಗಳ ಕೇಂದ್ರ. ಈ ಧಾರ್ಮಿಕ ಕೇಂದ್ರ ಬರುಬರುತ್ತಾ, ಜನಪ್ರಿಯವಾದದ್ದು ಕ್ರೀಡೆಗಳಿಗೆ. ಇಂದು ಪ್ರತಿಯೊಬ್ಬ ಕ್ರೀಡಾ ಪಟುವಿನ ಸ್ನಾಯುಗಳೂ ಈ ಹೆಸರನ್ನು ಕೇಳಿದ ತಕ್ಷಣ ರೋಮಾಂಚನಗೊಳ್ಳುತ್ತವೆ. ಪ್ರಾರಂಭದಲ್ಲಿ ಪಂದ್ಯಗಳು ಒಂದು ತಿಂಗಳವರೆಗೆ ನಡೆಯುತ್ತಿದ್ದವು. ಆ ಸಮಯದಲ್ಲಿ ಗ್ರೀಕರು ಯಾವುದೇ ಯುದ್ಧ ನಡೆಯುತ್ತಿದ್ದರೂ ನಿಲ್ಲಿಸಿಬಿಡುತ್ತಿದ್ದರು. ನಿಲ್ಲಿಸಿ ಕ್ರೀಡೋತ್ಸವದಲ್ಲಿ ಭಾಗವಹಿಸುತ್ತಿದ್ದರು. ಅಷ್ಟರ ಮಟ್ಟಿಗೆ ಈ ಕ್ರೀಡೆ

ಲಿಂಗದೇವರು ಹಳೆಮನೆ

ರಾಜಕಾರಣದ ಮೇಲೆ ತನ್ನ ಪ್ರಭಾವ ಬೀರಿತ್ತು. ಹಿಟ್ಲರನಂತಹ ಕಲ್ಲೆದೆಯ ಸರ್ವಾಧಿಕಾರಿಯೂ ಹಿಂದಿನವರು ನಡೆಸಿಕೊಂಡು ಬಂದ ಈ ಮಾನವತಾ ಸಂಪ್ರದಾಯಕ್ಕೆ ಬೆಲೆಕೊಟ್ಟು 1936ರಲ್ಲಿ ಬರ್ಲಿನ್‌ನಲ್ಲಿ ನಡೆದ ಒಲಂಪಿಕ್ಸ್ ಸಮಯದಲ್ಲಿ ಯುದ್ಧ ವಿರಾಮ ಘೋಷಿಸಿದ್ದ. ಯುದ್ಧ, ಮೇಲು, ಕೀಳು, ವರ್ಣೀಯ, ಅವರ್ಣೀಯ ಎಂಬ ಭೇದಗಳು ಇಲ್ಲಿ ನಶಿಸುವಂತಾಗಬೇಕು ಎಂಬುದು ಹಲವು ಪ್ರಮುಖರ ಆಸೆ. ಆದರೆ ಆ ದಿನಕ್ಕಾಗಿ ಇನ್ನೂ ಕಾಯಬೇಕಾಗಿದೆ. ಒಂದಲ್ಲ ಒಂದು ಕ್ಷುಲ್ಲಕ ಕಾರಣಗಳಿಂದಾಗಿ ಅಂಥ ದಿನಗಳಿನ್ನೂ ಬಂದೇ ಇಲ್ಲದಿರುವುದು ಮಾನವ ಜನಾಂಗದ ದುರಂತ.

ಒಲಂಪಿಕ್ಸ್ ಸ್ಪರ್ಧಾಂಗಣದಲ್ಲಿ ಪ್ರತಿಭಾನಿತ್ವ ತಳಿಗಳೇ ಸೇರುತ್ತವೆಂಬ ನಂಬಿಕೆ ಇತ್ತು. ಈ ನಂಬಿಕೆಯನ್ನು ಒಲಂಪಿಕ್ಸ್ ಎಂದೂ ಹುಸಿ ಮಾಡಿಲ್ಲ. ಭಾಗವಹಿಸಿದ ಒಂದಲ್ಲ ಒಂದು ಪಂದ್ಯದಲ್ಲಿ ತಮ್ಮ ಹೆಸರನ್ನು ಕಾಲದೇಶಗಳು ಮೀರುವಂತೆ ಅಚ್ಚೊತ್ತಿ ಹೋದವರು ಎಷ್ಟೋ ಮಂದಿ. ಅನಾಮಧೇಯರಾಗಿ ಉಳಿದವರು ನಿಮಿಷಗಳಲ್ಲಿ, ಗಂಟೆಗಳಲ್ಲಿ ಜಗದ್ವಿಖ್ಯಾತರಾಗಿದ್ದಾರೆ. ಅಂಥ ಖ್ಯಾತರ ಕಥೆಯೇ ಈ ಲೇಖನಕ್ಕೆ ಮೂಲ. (4ನೇ ಪುಟ ನೋಡಿ)

ಸಾಮಾಜಿಕ ಪಿಡುಗಿನ ನಿವಾರಣೆ ಒಂದು ಸಾಮೂಹಿಕ ಹೊಣೆ

"ದೇವದಾಸಿ" "ಬಾಲ್ಯವಿವಾಹ" ಹಾಗೂ "ವರದಕ್ಷಿಣೆ" ಇವು ನಮ್ಮ ಸಮಾಜಕ್ಕೆ ಅಂಟಿಕೊಂಡು ಬಂದ ಭಯಂಕರ ಪಿಡುಗುಗಳು. ಇವುಗಳನ್ನು ತೊಡೆದುಹಾಕುವುದು ಇಡೀ ಸಮಾಜದ ಹೊಣೆ.

ಹೆಣ್ಣು ಕುಲಕ್ಕೆ ಕಳಂಕ ಪ್ರಾಯವಾದ ದೇವದಾಸಿ ಪದ್ಧತಿಯನ್ನು ಪ್ರೋತ್ಸಾಹಿಸುವ ತಂದೆ–ತಾಯಿ, ಪಾಲಕರು, ಸಂಬಂಧಿಕರು ಅಥವಾ ಅದನ್ನು ಅನುಸರಿಸುವ, ಅನುಮತಿಸುವ ಇಲ್ಲವೇ ಒತ್ತಾಯಿಸುವವರು ಉಗ್ರ ಶಿಕ್ಷೆ ಮತ್ತು ಜುಲ್ಮಾನೆಗೆ ಗುರಿಯಾಗುತ್ತಾರೆ.

ಹೆಣ್ಣು ಹೆತ್ತವರ ಬಾಳಿನ ಭೀಕರ ಪ್ರಸಂಗವೆನಿಸಿದ ವರದಕ್ಷಿಣೆ ಕೇಳುವುದು, ಕೊಡುವುದು ಅಥವಾ ತೆಗೆದುಕೊಳ್ಳುವುದು ಕಾನೂನುಬಾಹಿರ. ಈ ಅಪರಾಧವೆಸಗಿದವರು ಕಾನೂನಿನ ಪ್ರಕಾರ ಆರು ತಿಂಗಳ ಜೈಲು ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆಗೆ ಒಳಗಾಗುವರು.

ಬಾಳ ಬೆಳಗಿನಲ್ಲಿಯೇ ಬದುಕಿನ ನೊಗ ಹೇರುವ ಬಾಲ್ಯ ವಿವಾಹ ಮತ್ತೊಂದು ಸಾಮಾಜಿಕಸಮಸ್ಯೆ. 21ವರ್ಷ ವಯಸ್ಸಿನೊಳಗಿನ ಯುವಕರು ಅಪ್ರಾಪ್ತ ವಯಸ್ಸಿನ ಹೆಣ್ಣನ್ನು ಮದುವೆಯಾದರೆ ಒಂದು ಸಾವಿರ ರೂ. ದಂಡ ಮತ್ತು 15 ದಿನ ಜೈಲುವಾಸ. 21 ವರ್ಷ ವಯಸ್ಸು ಮೇಲ್ಪಟ್ಟ ಯುವಕರು ಅಪ್ರಾಪ್ತ ವಯಸ್ಸಿನ ಹೆಣ್ಣನ್ನು ಮದುವೆಯಾದಲ್ಲಿ ಮೂರು ತಿಂಗಳ ಜೈಲುವಾಸ ಮತ್ತು ನಿಗದಿಪಡಿಸಿದ ದಂಡವನ್ನು ತೆರಬೇಕಾಗುತ್ತದೆ.

ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಮದುವೆ ಮಾಡುವುದು, ಮದುವೆಗೆ ಪ್ರೋತ್ಸಾಹಿಸುವುದು ಅಥವಾ ಪ್ರೇರೇಪಿಸಿದಲ್ಲಿ ಇಂತಹ ತಂದೆ ತಾಯಿಯರು, ಪೋಷಕರು ಅಥವಾ ಬಂಧುಗಳು ಮೂರು ತಿಂಗಳ ಜೈಲುವಾಸ ಮತ್ತು ನಿಗದಿಪಡಿಸಿದ ದಂಡ ತೆರಬೇಕಾಗುತ್ತದೆ.

ಇಂತಹ ಪ್ರಸಂಗಗಳು ಗಮನಕ್ಕೆ ಬಂದಲ್ಲಿ ಹತ್ತಿರದ ಪೋಲೀಸ್ ಠಾಣೆಗೆ ತಿಳಿಸಿ, ಹೆಚ್ಚಿನ ಮಾಹಿತಿಗೆ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, 3ನೇಮಹಡಿ, ಮಲ್ಟಿಸ್ಟೋರೀಡ್ ಬಿಲ್ಡಿಂಗ್, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–1 ಅಥವಾ ಜಿಲ್ಲಾ ಕೇಂದ್ರಗಳಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬೇಕು.

ಪ್ರಕಟಣೆ : ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು

ಸೀತಾಯಣ: ಸೀತೆಯ ಅಪ್ರಜ್ಞಾಪೂರ್ವಕ ಮುಖದ ಅನಾವರಣ

ಪೋಲಂಕಿ ರಾಮಮೂರ್ತಿಯವರ "ಸೀತಾಯಣ" ಆಗಲೆ ಆಲೋಚಕವರ್ಗದಲ್ಲಿ ಗದ್ದಲವೆಬ್ಬಿಸಿರುವ ಕೃತಿ; ಸಾಕಷ್ಟು ಜಿಜ್ಞಾಸೆಯೂ ಈ ಕೃತಿಯಲ್ಲಿರುವ ಲೇಖನಗಳ ಬಗೆಗೆ ಆಗಿದೆ. ಒಂದು ವಿಶಿಷ್ಟ ಸಂಸ್ಕೃತಿಯ ಸೃಷ್ಟಿಗಳಾದ ರಾಮಾಯಣ ಮಹಾಭಾರತದಂತ ಮಹಾಕಾವ್ಯಗಳು ಸಹಜವಾಗಿ ಆ ಸಂಸ್ಕೃತಿಯ ಎಲ್ಲ–ಒಳ್ಳೆಯ, ಕೆಟ್ಟ, ಇತ್ಯಾತ್ಮಕ ಮತ್ತು ನಿಷೇಧಾತ್ಮಕ–ವಿಚಾರಗಳನ್ನು, ಅನುಭವಗಳನ್ನು ಹಿಡಿದಿಟ್ಟಿರುವ ಮಹಾಪ್ರತಿಮೆಗಳಾಗಿರುತ್ತವೆ. ಅವು, ಆ ಕಾರಣಕ್ಕಾಗಿಯೇ, ಕಾಲದಿಂದ ಕಾಲಕ್ಕೆ, ಆಯಾಕಾಲದ ಸಾಂಸ್ಕೃತಿಕ ಅವಶ್ಯಕತೆಗಳಿಗನುಗುಣವಾಗಿ ವ್ಯಾಖ್ಯಾನಗೊಳ್ಳುತ್ತಲೂ ನಡೆದಿವೆ. ಕವಿಗಳಿಗೆ, ಮೂಲವಸ್ತುವನ್ನು ಒದಗಿಸಿ ಕೊಟ್ಟಿರುವಂಥವು ಇವು. ಭಾರತೀಯ ಭಾಷೆಗಳಲ್ಲೆಲ್ಲಾ ಅನೇಕ ವ್ಯತ್ಯಾಸಗಳೊಂದಿಗೆ ಪುನಃಸೃಷ್ಟಿಗೊಂಡಂಥವು ಇವು. ಈ ರಾಮಾಯಣ ಮಹಾಭಾರತಗಳ ಭಾರದಲ್ಲಿ ಭಾರತೀಯ ಸಾಹಿತ್ಯ ತಿಣುಕುತ್ತಿದೆ. ಆದ್ದರಿಂದ ಜನ ಸಾಮಾನ್ಯರಿಗೆ, ಏಕೆ ಅನೇಕ ವಿದ್ಯಾವಂತರಿಗೂ ಗೊತ್ತಿರುವ ರಾಮಾಯಣ ಭಾರತಗಳು ಕೇವಲ ಸ್ಥೂಲ ರೂಪದವು. ವಿವರಗಳು, ಸೂಕ್ಷ್ಮಗಳಿಂದ ವಂಚಿತರು ಅವರು. ಅಲ್ಲದೆ ಮೂಲ ರಾಮಾಯಣ ಮಹಾಭಾರತಗಳ, ರಾಮಮೂರ್ತಿಯವರು ಹೇಳುವ ರೀತಿಯ'ಓದು, ನಡದೇ ಇಲ್ಲವೆಂದು ಹೇಳಬೇಕು. ಆ ದೃಷ್ಟಿಯಿಂದ ಈ "ಸೀತಾಯಣ"ದಲ್ಲಿರುವ ಲೇಖನಗಳು, ಭಾರತೀಯ ಹಿಂದೂ ವೈದಿಕ ಸಂಸ್ಕೃತಿಯ ಮೂಲವಾದ "ರಾಮಾಯಣ"ದಲ್ಲಿ ಹುದುಗಿರುವ ಸೀತಾಯಣದ ಸೂಕ್ಷ್ಮಗಳ ಕಡೆ ಓದುಗರ ಗಮನ ಸೆಳೆಯುವ ಬಹುಮುಖ್ಯವಾದ ಕೆಲಸವನ್ನು ಮಾಡುತ್ತವೆ; ಯೋಚಿಸಲು ಪ್ರಚೋದಿಸುತ್ತವೆ; ಓಹೋ, ಹೀಗಿದೆಯೋ ಹಾಗಾದರೆ; ನೋಡಬೇಕಲ್ಲ, ಮೂಲ ರಾಮಾಯಣವನ್ನ; ರಾಮಮೂರ್ತಿಯವರು ಹೇಳುವ ಹಲವಾರು ವಿಚಾರಗಳು ನಿಜವಾಗಿದ್ದರೆ "ರಾಮಾಯಣ" ಕೇವಲ ಧರ್ಮನಿಷ್ಠರು ಸಂಪ್ರದಾಯಸ್ಥರು ಇಲ್ಲಿಯವರೆಗೆ ಸಾಮಾನ್ಯರಿಗೆ ಹೇಳಿದ, "ಒಳ್ಳೆಯರಾಮ–ಪತಿವ್ರತೆ ಸೀತೆ–ದುಷ್ಟರಾವಣರ ಕಥೆ" ಮಾತ್ರವಲ್ಲ, ಅನೇಕ ಅರ್ಥ ಸೂಕ್ಷ್ಮಗಳನ್ನು ಭಾವ ಸೂಕ್ಷ್ಮಗಳನ್ನು 'ವಿರೋಧಾಭಾಸಗಳನ್ನು ತನ್ನ ಅಂತರ್ಯದಲ್ಲಿ ಗರ್ಭೀಕರಿಸಿಕೊಂಡ ಸಂಶ್ಲಿಷ್ಟವಾದ ಕೃತಿಯಾಗಿರಬೇಕು, ಎನ್ನಿಸುತ್ತದೆ.

ನಮ್ಮ ಪ್ರಾಚೀನ ತತ್ತ್ವಶಾಸ್ತ್ರದ ಪುರಾಣ ಇತಿಹಾಸ ಕೃತಿಗಳ ವಿಮರ್ಶಾಪೂರ್ವಕ ಅಭ್ಯಾಸ ಈಗಲ್ಲಾದರೂ ಆಗಬೇಕಾಗಿದೆ; ಅಲ್ಲಿರುವ "ಸತ್ತ ಹೊರೆ" ಯಾವುದು, ಈಗ ಜೀವನೋಪಯೋಗಿಯಾಗಬಹುದಾದ ಅಂಶಗಳು ಯಾವುವು ? ಇವುಗಳ ವಿಮರ್ಶೆ ಆಗಬೇಕಾಗಿರುವ ಈ ಸಂದರ್ಭದಲ್ಲಿ ಪೋಲಂಕಿ ರಾಮಮೂರ್ತಿಯವರ ಈ ವಿಚಾರ ಪ್ರಚೋದಕ ಕೃತಿ ಮೌಲಿಕವಾದುದ್ದಾಗಿದೆ; ಹಾಗೆಯೇ ಪ್ರಶ್ನೆಗಳ, ವಿವಾದಗಳ ಸರಮಾಲೆಯನ್ನು ಎಬ್ಬಿಸುವಂಥಾದ್ದೂ ಆಗಿದೆ.

ರಾಮಾಯಣಕ್ಕೆ ಸಂಬಂಧಿಸಿದಂತೆ ಐದು ಲೇಖನಗಳು ಈ ಪುಸ್ತಕದಲ್ಲಿವೆ; ಆರನೆಯದಾಗಿ

ಪೋಲಂಕಿಯವರ ಸೀತಾಯಣ ವಿಶ್ಲೇಷಣೆ–೧

ಹೆಚ್. ಎಂ. ಚನ್ನಯ್ಯ

"ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ" ಲೇಖನವಿದೆ: ರಾಮಾಯಣವನ್ನು ಕುರಿತು ಬರೆಯುವಾಗ ಸೀತೆಯ ಅಲ್ಲಿನ ಸ್ಥಿತಿಯನ್ನು ಕುರಿತು ವಿಶ್ಲೇಷಿಸಲಾಗಿದೆ; ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯ ಸ್ಥಾನಮಾನಗಳೇನೆಂಬುದರ ವಿಚಾರವಾಗಿ ಚರ್ಚಿಸಲಾಗಿದೆ. ಅಂದರೆ, ಒಟ್ಟಿಗೆ ಇಲ್ಲಿ ಪ್ರಾಚೀನಭಾರತದ ಮತ್ತು ಆಧುನಿಕ ಭಾರತದ ಸ್ತ್ರೀಯನ್ನೆ ಕುರಿತು ಚಿಂತಿಸಲಾಗಿದೆ. ಹೀಗೆ ಈ ಲೇಖನಗಳಲ್ಲಿ ಒಂದು ಒಳಸಂಬಂಧ ಇದೆ. ಇನ್ನಾವ ಪೌರಾಣಿಕ ಸ್ತ್ರೀಗಿಂತಲೂ ಹೆಚ್ಚಾಗಿ ಭಾರತೀಯ ಸ್ತ್ರೀ ಹಿಂದೆ ಏನಾಗಿದ್ದಳು; ಈಗೇನಾಗಿದ್ದಾಳೆ ಎನ್ನುವುದಕ್ಕೆ ಸಾಂಪ್ರದಾಯಿಕವಾಗಿ ಸೀತೆ ಯಾವ ಮೌಲ್ಯಗಳಿಗೆ ಪ್ರತೀಕವಾಗಿದ್ದಾಳೊ ಅವುಗಳು ಕಾರಣವಾಗಿವೆ. ಏಕಪತ್ನಿವ್ರತಸ್ಥನಾದ ರಾಮ, ಏಕಪತಿವ್ರತೆಯಾದ ಸೀತೆ, ಭಾರತೀಯ ಆದರ್ಶ. ಆದರೆ, ಮೊನ್ನೆ ಮೊನ್ನೆಯವರೆಗೆ ಹಿಂದೂ ಭಾರತೀಯ ಪುರುಷ ಕಾನೂನಿನ ಪ್ರಕಾರ ಏಕಪತ್ನೀವ್ರತ ಹಿಡಿಯಬೇಕಾಗಿರಲಿಲ್ಲ; ಆದರೆ ಸ್ತ್ರೀ ಏಕಪತಿವ್ರತೆಯಾಗಿರಬೇಕಾಗಿತ್ತು. ಅಂದರೆ, ಪುರುಷನಿಗೆ ಸಂಬಂಧಿಸಿದಂತೆ ಅದು ಆದರ್ಶ; ಹಾಗೆ ಬೇಕಾದರೆ ಅವನಿರಬಹುದು, ಇಲ್ಲದಿದ್ದರೆ ಇಲ್ಲ. ಆದರೆ, ಸ್ತ್ರೀ ಮಾತ್ರ ಪಾಲಿಸಲೇಬೇಕಾದ ಒತ್ತಾಯದ ಅವಶ್ಯಕತೆ, ಅದು. ಏಕೆಂದರೆ ಐದು ಜನ ಅಣ್ಣ ತಮ್ಮಂದಿರನ್ನು ಮದುವೆಯಾದ ದ್ರೌಪದಿಯಾಗಲಿ; ದೇವರಾಜ ಕುತೂಹಲಾರ ಇಂದ್ರನನ್ನು ಕೂಡಿದ ಅಹಲ್ಯೆಯಾಗಲಿ; ಅಥವಾ "ನಿಯೋಗ"ದಿಂದ ಕುಂತಿ ಮಾದ್ರಿಯರು, ಅಂಬೆ ಅಂಬಾಲಿಕೆಯರು ಮಕ್ಕಳನ್ನು ಹಡೆದದ್ದಾಗಲೀ, ಸ್ತ್ರೀಗೆ ಸಂಬಂಧಿಸಿದಂತೆ ಮುಂದೆ ನಿಷಿದ್ಧವೇ ಆದವು. ಪುರುಷ ಮಾತ್ರ ಸ್ವಚ್ಛಂದ; ಸ್ತ್ರೀಮಾತ್ರ ಪಾತಿವ್ರತ್ಯದ ಶೃಂಕಲೆಯಲ್ಲಿ ಬಂಧಿತಳಾದಳು. ಹೀಗಾಗಿ, ಪಾತಿವ್ರತ್ಯದ ಮಹಿಮೆಯನ್ನು ಹೊಗಳಿ ಹಾಡುವ ಅನೇಕ ಕಥೆಗಳು ನಮ್ಮಲ್ಲಿವೆ: ಪಾತಿವ್ರತ್ಯದ ಮಹಿಮೆಯಿಂದ ಯಮನನ್ನು ಗೆದ್ದವರಿಂದ ಹಿಡಿದು ಸೂರ್ಯನ ಚಲನೆಯನ್ನು ಹಿಡಿದು ನಿಲ್ಲಿಸಿದ ಪತಿವ್ರತೆಯರ ಕಥೆಗಳು ನಮ್ಮಲ್ಲಿ ಹೇರಳ. ಪತ್ನೀವ್ರತದಿಂದ ಇಂಥದನ್ನು ಸಾಧಿಸಿದವರ ಕಥೆಗಳು ಇಲ್ಲವೇ ಇಲ್ಲ. ಹೀಗೆ, ಸಾಂಸ್ಕೃತಿಕವಾಗಿ, ಭಾರತೀಯ ಹಿಂದೂ ಸ್ತ್ರೀ "ಪತಿವ್ರತೆ"ಯಾಗಿ ಗೌರವಿಸಲ್ಪಟ್ಟು, ಸಹಜ ಹೆಣ್ಣಾಗಿ ತಿರಸ್ಕೃತಳಾದವಳು; ಸಹಜವಾದ ಮಾನವೀಯ ಗುಣಗಳನ್ನುಳ್ಳ ವ್ಯಕ್ತಿಯಾಗದೆ, ಪುರುಷನ ನೆರಳಾದವಳು. ಈ ಎಲ್ಲ ಧೋರಣೆಗಳಿಗೆ ಜನಪ್ರಿಯವಾಗಿರುವ ಸೀತೆಯು "ಸಾಂಕೇತಿಕ ಪ್ರತಿಮೆ"ಯಾಗಿದ್ದಾಳೆ. ಅಂಥವರಲ್ಲಿ ಪೋಲಂಕಿ ರಾಮಮೂರ್ತಿಯವರು, ರಾಮಾಯಣವನ್ನು ಒಂದು ಸ್ವತಂತ್ರ ಶಿಲ್ಪವುಳ್ಳ ಸಾಹಿತ್ಯಕೃತಿಯೆಂದು ಪರಿಗಣಿಸಿ, ರಾಮಾಯಣ ಕರ್ತೃವಿನ ಉದ್ದೇಶವೇನೇ ಇರಲಿ, ಕೃತಿಯಲ್ಲಿನ "ಹಾಸು ಹೊಕ್ಕು" ಮತ್ತೆ ಅದು ಒಂದು ಸ್ವತಂತ್ರವಾದ *Structure* ಆಗಿರುವುದರಿಂದಲೇ ಉದ್ಭವವಾಗುವ ಒಳಧ್ವನಿಗಳು, ಒಳಅರ್ಥಗಳು ಏನಿರಬಹುದು, ಎನ್ನುವುದನ್ನು ಭಾಷೆಯ ವಿಶ್ಲೇಷಣೆಯ ಮೂಲಕ, ಸಂದರ್ಭಗಳ ವಿಶ್ಲೇಷಣೆ ವ್ಯಾಖ್ಯಾನಗಳ ಮೂಲಕ ಮಾಡುವ ಪ್ರಯತ್ನದಲ್ಲಿ ಬಹಳ ಮಟ್ಟಿಗಿನ ಯಶಸ್ಸು ಪಡೆದಿದ್ದಾರೆ. ಇಲ್ಲಿಯವರೆಗೆ ಗುರುತಿಸದಿದ್ದ ಸೀತೆಯ ಅಪ್ರಜ್ಞಾಪೂರ್ವಕವಾದ ಇನ್ನೊಂದು ಮುಖವನ್ನು ಅನಾವರಣ ಮಾಡುವ ಪ್ರಯತ್ನ ಮಾಡಿದ್ದಾರೆ.

ಪೋಲಂಕಿ ರಾಮಮೂರ್ತಿಯವರ, ಈ ಕೃತಿಯಲ್ಲಿನ ವಿಚಾರಗಳನ್ನು ನನಗೆ ತಿಳಿದ ಮಟ್ಟಿಗೆ ಒರಗೆ ಹಚ್ಚಿ ಪರೀಕ್ಷಿಸುವುದು, ವಿವೇಚಿಸುವುದು. ಈ ಲೇಖನಮಾಲೆಯ ಉದ್ದೇಶವಾಗಿದೆ.

(ಮುಂದಿನ ಪಂಚಮ ಸಂಚಿಕೆಗಳ ನೋಡಿರಿ)

ಒಲಂಪಿಕ್ಸ್ ಕಪ್ಪು ಕಥೆಗಳು

(ಮೊದಲ ಪುಟದಿಂದ)

ಕ್ರಿ.ಪೂ. ಆರರಲ್ಲಿ ಮಿಲೊ.ಎಂಬ ಕುಸ್ತಿಪಟುವಿದ್ದ. ಆತ ಒಲಂಪಿಕ್ಸ್‌ನಲ್ಲಿ ಭಾಗವಹಿಸಿ ಆರು ಬಾರಿ ಜಯಶಾಲಿಯಾಗಿದ್ದ. ಆತನಿಗೆ ತನ್ನ ಶಕ್ತಿಯಲ್ಲಿ ಎಷ್ಟೊಂದು ನಂಬಿಕೆ ಇತ್ತೆಂದರೆ ಕುಸ್ತಿಯಲ್ಲಿ

ಹುಚ್ಚು ಸಾಹಸಿ

ಜಯಶಾಲಿಯಾದ ಮೇಲೆ ಒಲಂಪಿಕ್ಸ್ ಕ್ರೀಡಾಂಗಣವಲ್ಲಿ ಬಲಶಾಲಿಯಾದ ಹೋರಿಯೊಡನೆ ಹೋರಾಡಿ ಅದನ್ನು ಸಾಯಿಸಿ ಉರುಳಿಸಿದ್ದ. ಈತ ಒಂದು ರೀತಿಯಲ್ಲಿ ಹುಚ್ಚು ಸಾಹಸಿ. ತನ್ನ ಶಕ್ತಿಯನ್ನು ಎಲ್ಲಂದರಲ್ಲಿ ಪ್ರದರ್ಶಿಸಬೇಕೆಂಬ ತುಡಿತದವನು. ಇಂಥ ಹುಚ್ಚು ಸಾಹಸವೊಂದರಲ್ಲೇ ತನ್ನ ಜೀವಕಳೆದುಕೊಂಡದ್ದು ಈತನ ದುರಂತ. ಒಮ್ಮೆ ಕಾಡಿನ ಮಧ್ಯೆ ನಡೆದುಕೊಂಡು ಹೋಗುತ್ತಿರುವಾಗ ಅರ್ಧ ಕತ್ತರಿಸಿದ ಮರವೊಂದು ಅವನ ಕಣ್ಣಿಗೆ ಬಿತ್ತು. ಮರ ಕೊಯ್ಯುವವನು ಅರ್ಧ ಕೊಯ್ದು ಅದಕ್ಕೆ ಬೆಣೆಯೊಂದನ್ನು ಜಡಿದು ಹೊರಟುಹೋಗಿದ್ದ. ಮಿಲೋಗೆ ತನ್ನ ಶಕ್ತಿಯನ್ನು ಪ್ರದರ್ಶಿಸಲು ಅತ್ಯುತ್ತಮ ಅವಕಾಶ ದೊರೆಯಿತೆನ್ನಿಸಿತು. ಬೆಣೆಯನ್ನು ಕಿತ್ತುಹಾಕಿ ತನ್ನ ಕೈಯನ್ನು ಇಟ್ಟು ತನ್ನ ಶಕ್ತಿಯಿಂದಲೇ ಮರವನ್ನು ಉರುಳಿಸಬೇಕೆಂಬ ಆಲೋಚನೆ. ಒರಟು ಧೈರ್ಯ, ತನ್ನ ದೇಹಬಲದಲ್ಲಿ ಅಸಾಧ್ಯ ನಂಬಿಕೆ, ಹುಚ್ಚು ಸಾಹಸ ಮೂರೂ ಮೇಳವಿಸಿದ್ದವು. ಕೈ ಹಾಕಿ ಬೆಣೆ ತೆಗೆದಿದ್ದೇ ತಡ ಅವನ ಕೈ ಸಂದಿಯಲ್ಲಿ ಸಿಕ್ಕಿಹಾಕಿಕೊಂಡಿತು. ಒಂಟಿ, ಜೊತೆಗೆ ಅಸಹಾಯಕನಾದ ಮಿಲೊಗೆ ತನ್ನ ಶಕ್ತಿಯ ಮಿತಿಯ ಅರಿವಾಗಿತ್ತು. ಕೆಲ ದಿನಗಳ ನಂತರ ಮರ ಕತ್ತರಿಸುವವನು ಬಂದಾಗ ಮರದ ಸಂದಿಗೆ ಸಿಕ್ಕಿಹಾಕಿಕೊಂಡ ಅಸ್ಥಿಪಂಜರವೊಂದು ನೇತಾಡುತ್ತಿತ್ತು. ತೋಳ, ಹದ್ದು, ನರಿಗಳು ಮಿಲೋನನ್ನು ತಿಂದು ಹಾಕಿದ್ದವು. ಎಂಥ ವೀರನಿಗೆ ಎಂಥ ಸಾವು: ಒಲಂಪಿಕ್ಸ್ ಶೂರನ ದುರಂತ ಸಾವು ಹೀಗಾಗಿತ್ತು.

ಆಧುನಿಕ ಒಲಂಪಿಕ್ಸ್ ಪ್ರಾರಂಭವಾದದ್ದು 1896ರಲ್ಲಿ. ಅಂದಿನಿಂದ ಇಂದಿನವರೆಗೆ ನಾಲ್ಕು ವರ್ಷಕ್ಕೊಮ್ಮೆ ಪ್ರಸಿದ್ಧ ಪಟ್ಟಣಗಳಲ್ಲಿ ಈ ಕ್ರೀಡೋತ್ಸವ ಜರುಗುತ್ತಲೇ ಬಂದಿದೆ. ಆದರೆ 1916, 1940 ಮತ್ತು 1944ರಲ್ಲಿ ಯುದ್ಧದಿಂದಾಗಿ ಈ ಕ್ರೀಡೆಗಳು ನಡೆಯಲಿಲ್ಲ. ಆಧುನಿಕ ಒಲಂಪಿಕ್ಸ್‌ನ ಪಿತಾಮಹ ಫ್ರೆಂಚ್‌ನ ಬರೂನ್ ಪಿಯರೆಡೆ ಕೋಬರ್ಟಿನ್. ಆತ ಕಂಡ ಮಹಾನ್ ಕನಸೇ ಇಂದಿನ ಒಲಂಪಿಕ್ಸ್ ಆಟಗಳು."ಒಲಂಪಿಕ್ಸ್ ಆಟದಲ್ಲಿ ಗೆಲುವಿಗಿಂತ ಭಾಗವಹಿಸುವುದು ಮುಖ್ಯ. ಜೀವನದಲ್ಲಿ ಗೆಲುವಿಗಿಂತ ಹೋರಾಟ ಮುಖ್ಯ" ಎಂಬ ಒಲಂಪಿಕ್ಸ್ ಪ್ರತಿಜ್ಞೆಯನ್ನು ನಾಣ್ಯೀಕರಿಸಿದವನೂ ಅವನೇ.

ಪ್ರಥಮ ಆಧುನಿಕ ಒಲಂಪಿಕ್ಸ್ ನಡೆದದ್ದು 1896ರಲ್ಲಿ ಅಥೆನ್ಸಿನಲ್ಲಿ. ಒಲಂಪಿಕ್ಸ್ ಗ್ರೀಸ್‌ನ ಕೂಸು ಎಂಬುದರ ಜ್ಞಾಪಕಾರ್ಥವಾಗಿ ಅದರ ಮರುಹುಟ್ಟೂ ಅಲ್ಲೇ ಪ್ರಾರಂಭವಾಯಿತು. ಕ್ರಿ.ಪೂ. 320ರಲ್ಲಿ ಹೆರೋಡಿಸ್ ಕ್ರೀಡಾಂಗಣವಿದ್ದ ಜಾಗದಲ್ಲೇ ಹೊಸದೊಂದು ಕ್ರೀಡಾಂಗಣ ನಿರ್ಮಿಸಿ ಒಲಂಪಿಕ್ಸ್ ನಡೆಸಲಾಯಿತು. ಅಥೆನ್ಸ್‌ನ ಈ ಕ್ರೀಡೆ ಇಂದಿಗೂ ಹಸಿರಾಗಿ ಉಳಿದಿರುವುದಕ್ಕೆ ಕಾರಣ ಏನು ? ಅಮೆರಿಕಾ ಸಂಯುಕ್ತ ಸಂಸ್ಥಾನ ಎಲ್ಲಾ ಕ್ರೀಡಾ ವಿಭಾಗಗಳಲ್ಲೂ ತನ್ನ ಹಿರಿಮೆಯನ್ನು ಮೆರೆದದ್ದಕ್ಕೊ ? ಅಥವಾ ಫ್ರೆಂಚ್ ಮನುಷ್ಯನೊಬ್ಬ ಆಧುನಿಕ ಒಲಂಪಿಕ್ಸ್ ಅನ್ನು ಪ್ರಾರಂಭ ಮಾಡಿದ್ದಕ್ಕೊ ? ಆದರೆ ಇದ್ಯಾವುದಕ್ಕೂ ಅಲ್ಲ. ಈ ಒಲಂಪಿಕ್ಸ್ ಇಂದಿಗೂ ಹಸಿರಾಗಿ ಉಳಿದಿರುವುದು ಮ್ಯಾರಾಥಾನ್ ಓಟಕ್ಕೆ. ಈ ಮ್ಯಾರಥಾನ್ ಗೆದ್ದವನು ಮುಗ್ಧ, ಗುಡ್ಡುಗಾಡಿನ ಕುರುಬನೊಬ್ಬ. ಇಪ್ಪತ್ತೈದು ವರ್ಷದ ಗ್ರೀಕ್ ಲಕ್ಷಣಗಳನ್ನೊಳಗೊಂಡ ಸುಂದರ ಮೀಸೆಯ, ತೆಳುಮೈಯ ಈ ಕುರುಬನ ಹೆಸರು ಸ್ಪಿರಿಡನ್ ಲೂಯಿಸ್. ಮರೋಸಿ ಗುಡ್ಡಗಾಡುಗಳ ಪ್ರದೇಶದಿಂದ ಬಂದವನು. ಅವನಿಗಿದ್ದ ಒಂದೇ ಒಂದು ಖ್ಯಾತಿಯೆಂದರೆ ಆ ಗುಡ್ಡಗಾಡು ಪ್ರದೇಶದಲ್ಲಿದ್ದ ಗ್ರೀಸಿನ ಸೈನ್ಯದ ತುಕಡಿಯೊಂದರಲ್ಲಿ ಚೆನ್ನಾಗಿ ಮಾರ್ಚ್‌ಫಾಸ್ಟ್ ಮಾಡುತ್ತಿದ್ದನೆಂಬುದು. ಅವನ ಅದೃಷ್ಟಕ್ಕೆ ಅವನಿದ್ದ ತುಕಡಿಯ ಕರ್ನಲ್ಲೊಬ್ಬ ಒಲಂಪಿಕ್ಸ್ ಕ್ರೀಡೆಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದ. ಅವನ ಪ್ರಭಾವದಿಂದಾಗಿ ಸ್ಪಿರಿಡನ್‌ಗೆ ಮ್ಯಾರಥಾನ್‌ನಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತು.

ಮುಂದಿನದು ಇತಿಹಾಸ. ಮ್ಯಾರಥಾನ್ ಎಂಬುದು ಅಥೆನ್ಸಿನಿಂದ ಸುಮಾರು 25 ಮೈಲಿ ದೂರದಲ್ಲಿರುವ ಒಂದು ಪಟ್ಟಣ. ಆಗಿನ ಕಾಲದಲ್ಲಿ ಇವೆರಡರ ಮಧ್ಯದ ದಾರಿ ಇನ್ನೂ ಬಳಸಾಗಿತ್ತು ಜೊತೆಗೆ ಕಚಡವೂ ಆಗಿತ್ತು. 1896ರ ಒಲಂಪಿ

ಕುರುಬನ ದಾಖಲೆ

ಕ್ಸ್‌ನ ಐದನೇ ದಿನ ಈ ಅತಿ ದೂರದ ಓಟ ಪ್ರಾರಂಭವಾಯಿತು. ಅಲ್ಲಿಯವರೆಗೆ ಯಾವುದೇ ಓಟದಲ್ಲಿ ಗ್ರೀಕರು ಒಂದೂ ಪದಕವನ್ನು ಗಳಿಸಿರಲಿಲ್ಲ. ಭಾನುವಾರ ಎರಡು ಗಂಟೆ. ಇಪ್ಪತ್ತೈದು ಜನ ಓಟಗಾರರು ಸಾಲುಗಟ್ಟಿ ನಿಂತಿದ್ದಾರೆ,ಅಥೆನ್ಸಿನ ಕಡೆಗೆ ಮುಖಮಾಡಿಕೊಂಡು.ಸ್ಪಿರಿಡನ್ ಲೂಯಿಸ್ ಸಹ ಒಬ್ಬ ಅವರಲ್ಲಿ. ಹಿಂದಿನ ದಿನ ತನ್ನ ಯಶಸ್ಸಿಗಾಗಿ ದೇವರನ್ನು ಪ್ರಾರ್ಥಿಸಿ, ಉಪವಾಸವಿದ್ದ. ಇಡೀ ಗ್ರೀಸ್ ಈ ಒಂದು ಪಂದ್ಯದಲ್ಲಾದರೂ ತಮ್ಮ ಅಭ್ಯರ್ಥಿ ಗೆಲ್ಲಲೆಂದು, ಮೌನವ್ರತದಲ್ಲಿದೆ. ಆದರೆ ಯಾರಿಗೂ ಸ್ಪಿರಿಡನ್ ಗೆಲ್ಲುತ್ತಾನೆಂಬ ನಂಬಿಕೆ ಮಾತ್ರ ಇಲ್ಲ. ಇಪ್ಪತ್ತೈದು ಮೈಲಿ ಯುದ್ದಕ್ಕೂ ಕಿಕ್ಕಿರಿದ ಜನಸಂದಣಿ. ಹರ್ಷೋದ್ಗಾರ, ಸೀಟಿ, ಕೇಕೆ, ಅಬ್ಬರ. ಓಟ ಪ್ರಾರಂಭವಾಯಿತು.ಮಧ್ಯೆ ಮಧ್ಯೆ ಓಟಗಾರರಿಗೆ ಪಾನೀಯಗಳ ಸರಬರಾಜು. ಪಿಕರಾನಿ ಎಂಬ ಹಳ್ಳಿ ತಲಪುವ ಹೊತ್ತಿಗೆ ಫ್ರೆಂಚ್‌ನ ಲೆಮುರ್ಸಿಯಕ್ಸ್ ತುಂಬಾ ಮುಂದಿದ್ದ. ಅವನ ಹಿಂದೆ ಸುಮಾರು ದೂರದಲ್ಲಿ ಆಸ್ಟ್ರೇಲಿಯಾದ ಫ್ಲಾಕ್, ಅವನ ಜೊತೆ ಜೊತೆಗೇ ಅಮೆರಿಕಾ ಮತ್ತು ಹಂಗೆರಿಯ ಸ್ಪರ್ಧಿಗಳು. ನಂತರ ಬಿಕೋ ಎನ್ನುವಷ್ಟು ದೂರ ಯಾರೂ ಇಲ್ಲ. ಹಾ, ಅಂದಹಾಗೆ ಆ ದೂರದ ರಸ್ತೆಯ ತಿರುವಿನಲ್ಲಿ ಒಂದು ಸಣ್ಣ ಆಕೃತಿ, ಸ್ಪಿರಿಡನ್ ಲೂಯಿಸ್. ಅವನನ್ನು ಕಾಣುತ್ತಲೇ ಪಿಕ

ನೀಗ್ರೋಗಳು : ವೇಗದ ದೊರೆಗಳು

ಒಲಂಪಿಕ್ಸ್‌ನಲ್ಲಿ ಪ್ರಪಂಚದ ಅತ್ಯಂತ ವೇಗದ ಓಟಗಾರ ಯಾರೆಂಬುದನ್ನು ನಿರ್ಧರಿಸುವುದು 100 ಮೀಟರ್ ಸ್ಪರ್ಧೆ. ಇಲ್ಲಿಯವರೆಗೆ ನಡೆದಿರುವ ಈ ಸ್ಪರ್ಧೆಯಲ್ಲಿ ಅತಿ ಹೆಚ್ಚು ಬಾರಿ ಚಿನ್ನದ ಪದಕ ಗಳಿಸಿರುವವರು ನೀಗ್ರೋಗಳು. ಒಲಂಪಿಕ್ಸ್‌ನ 100 ಮೀಟರ್ ಓಟದಲ್ಲಿ ಮೊತ್ತ ಮೊದಲು ಚಿನ್ನದ ಪದಕ ಗಳಿಸಿದ ನೀಗ್ರೋ ಯಾರು ಗೊತ್ತೆ ? ಆತ ಎಡ್ಡಿ ತೋಲನ್. 1932 ರ ಲಾಸ್ ಏಂಜಲ್ಸ್ ನಲ್ಲಿ ಈತ ತನ್ನ ದೇಶದವನೇ ಪ್ರಬಲಪ್ರತಿಸ್ಪರ್ಧಿ ಮೆಟ್ಕಾಫ್ ಅನ್ನು ಒಂದು ಅಂಗುಲದ ಅಂತರದಲ್ಲಿ ಸೋಲಿಸಿದ. ಆ ಪಂದ್ಯದಲ್ಲಿ ತೋಲನ್ 90 ಮೀಟರ್‌ವರೆಗೆ ಒಳ್ಳೆಯ ಅಂತರವನ್ನೇ ಕಾಯ್ದುಕೊಂಡು ಬಂದಿದ್ದ. ಕಡೆಯ 10 ಮೀಟರ್‌ನಲ್ಲಿ ಜೆಟ್‌ನಂತೆ ಬಂದ ಮೆಟ್ಕಾಫ್ ಅಂತರವನ್ನು ಸಮಮಾಡಿಕೊಂಡ. ಕಡೆಗೆ ಇಬ್ಬರೂ ಒಟ್ಟಿಗೇ ಟೇಪಿಗೆ ಎದೆಯೊಡ್ಡಿದರು. ಫೋಟ್ ಫಿನಿಷ್‌ನಲ್ಲಿ ಒಂದು ಅಂಗುಲದ ಅಂತರದಲ್ಲಿ ತೋಲನ್ ಗೆದ್ದಿದ್ದ. ಅಲ್ಲಿಂದ ಈಚೆಗೆ ನಡೆದ ಒಲಂಪಿಕ್ಸ್‌ನಲ್ಲಿ ಗೆದ್ದ ಲೂಯಿಸ್‌ವರೆಗೆ ನೀಗ್ರೋಗಳು 'ವೇಗದ ದೊರೆ'ಗಳ ಪಟ್ಟವನ್ನು ಉಳಿಸಿಕೊಂಡು ಬಂದಿದ್ದಾರೆ.

ರಾನಿಯ ರೈತರು ಹರ್ಷೋದ್ಗಾರದಿಂದ ಕಿರುಚಿದರು.ತಮ್ಮವನೆಂದು ಅವರು ಕಿರುಚಿದ್ದೇ ಹೊರತು ಸ್ಪಿರಿಡನ್ ಈ ಪಂದ್ಯ ಗೆಲ್ಲುತ್ತಾನೆಂಬ ತೃಣಮಾತ್ರದ ನಂಬಿಕೆಯೂ ಅವರಿಗಿರಲಿಲ್ಲ. ಅವರಿಗಿರಲಿ, ಸ್ಪಿರಿಡನ್‌ಗೂ ತಾನು ಗೆಲ್ಲುವುದಿರಲಿ, ಈ ಪಂದ್ಯವನ್ನು ಮುಗಿಸುತ್ತೇನೆಂಬ ವಿಶ್ವಾಸವೂ ಇರಲಿಲ್ಲ. ಆದರೆ ಒಂದು ಕ್ಷಣ, ತನ್ನವರು ತನ್ನ ಮೇಲಿಟ್ಟ ಭರವಸೆ, ಆಸೆ, ನಂಬಿಕೆಗಳ ಚೈತನ್ಯ ತನ್ನಲ್ಲಿ ಒಗ್ಗೂಡಿದಂತಹ ಅನುಭವವಾಯಿತು ಸ್ಪಿರಿಡನ್‌ಗೆ. ಕಾಲುಗಳಿಗೆ ಅದಮ್ಯ ಶಕ್ತಿ ಮೂಡಿಬಂದಂತಾಯಿತು. ನಿಧಾನವಾಗಿ ವೇಗ ವರ್ಧಿಸತೊಡಗಿತು. ಒಬ್ಬೊಬ್ಬರಾಗಿ ತನ್ನ ಮುಂದಿನ ಸ್ಪರ್ಧಿಗಳು ಹಿಂದೆ ಬೀಳತೊಡಗಿದರು. ಸುಮಾರು 24 ಶತಮಾನಗಳ ಹಿಂದೆ ಸ್ಪಿರಿಡನ್‌ನ ದೇಶವಾಸಿಯೊಬ್ಬ ರಕ್ತ ಒಸರುವ ಕಾಲುಗಳಲ್ಲಿ ಹೀಗೇ ಇದೇ ದಾರಿಯಲ್ಲಿ ಓಡುತ್ತಾ ನಡೆದಿದ್ದ. ಪರ್ಶಿಯನರ ಮೇಲಿನ ಒಂದು ದಿನದ ಭಾರೀ ಯುದ್ಧದ ನಂತರ ತನ್ನ ಯುದ್ಧದ ಉಡುಪಿನಲ್ಲೇ ಓಡುತ್ತಾ ಓಡುತ್ತಾ ತನ್ನ ದೇಶದ ವಿಜಯವನ್ನು ತಿಳಿಸಲು ಬಂದಿದ್ದ. ಆತನ ಹೆಸರು ಫಿಡಿಪ್ಪೈಡ್ಸ್. ಆತ ಒಲಂಪಿಕ್ಸ್ ಚಾಂಪಿಯನ್ ಆಗಿದ್ದ. ಆತನ ದಂಡನಾಯಕ ವಿಜಯದ ಸಂದೇಶವನ್ನು ಅಥೆನ್ಸ್‌ಗೆ ಮುಟ್ಟಿಸಬೇಕೆಂದು ಆತನಿಗೆ ತಾಕೀತು ಮಾಡಿದ್ದ. ತನ್ನ ಜೀವನದ ದೀರ್ಘ ಓಟಕ್ಕೆ ಫಿಡಿಪೈಡ್ಸ್ ಹೊರಟಿದ್ದ. ಗಾಯಗೊಂಡ ದೇಹ, ರಕ್ತಒಸರುವ ಕಾಲುಗಳು, ಅಸ್ತವ್ಯಸ್ತ ಯುದ್ಧದ ಉಡುಪುಗಳು, ಕೈಯಲ್ಲಿ ಆಯುಧ. ಆತ ತನ್ನ ಗುರಿ ಮುಟ್ಟಿದಾಗ, ಅವನ ಶರೀರದಲ್ಲಿ ಉಳಿದಿದ್ದ ಶಕ್ತಿ "ಆರಾಮವಾಗಿರಿ, ನಾವು ಗೆದ್ದಿದ್ದೇವೆ" ಎನ್ನುವಷ್ಟು ಮಾತ್ರ. ಅಷ್ಟು ಹೇಳಿ ಕುಸಿದುಬಿದ್ದ. ಈ ನೆನಪು ಎಲ್ಲಾ ಗ್ರೀಕರ ಮನಸ್ಸಿನಲ್ಲೂ ಮರುಕಳಿಸುತ್ತಿತ್ತು. ಅದೇ ದಾರಿಯಲ್ಲಿ ಇಂದು ಸ್ಪಿರಿಡಾನ್ ತನ್ನ ಜೀವನದ ದೀರ್ಘ ಹೋರಾಟ ಪ್ರಾರಂಭಿಸಿದ್ದ. ಕರಾವತಿ ಹಳ್ಳಿಯ ಹತ್ತಿರ ಬಂದಾಗ ಫ್ರೆಂಚ್‌ನ ಲೆಮೂರ್ಸಿಯಕ್ಸ್ ಉಳಿದವರಿಗಿಂತ ಎಷ್ಟೊಂದು ಮುಂದಿದ್ದನೆಂದರೆ, ಗುಂಪಿನಲ್ಲಿ ಕೆಲವರು ಅವನ ಕಡೆ ವಿಜಯದ ಹಾರವನ್ನು ಎಸೆದರು. ಅಲ್ಲಿಂದ ಮುಂದೆ ರಸ್ತೆ ದಿಣ್ಣೆಯಿಂದ ಕೂಡಿ ಓಡುವವರಿಗೆ ತ್ರಾಸದಾಯಕವಾಯಿತು. ಲೆಮೂರ್ಸಿಯಕ್ಸ್ ಏದುಸಿರುಗೆ ಆರಂಭವಾಗಿ ಮುಂದೆ ಹೋಗುವುದು ತುಂಬಾ ಕಷ್ಟವಾಯಿತು. ಬೀಳದಿರಲೆಂದು ವೇಗ ಕಡಿಮೆ ಮಾಡಿ ನಡೆಯುವುದಕ್ಕೆ ಪ್ರಾರಂಭಿಸಿದ. ಆಸ್ಟ್ರೇಲಿಯಾದ ಫ್ಲಾಕ್ ಆತನನ್ನು ಹಿಂದೆ ಹಾಕಿ ಮುಂದೆ ಹೊರಟ. ಆದರೆ ಆತನೂ ಸುಸ್ತಾಗಿದ್ದು, ಸಮತೋಲನ ಕಾಪಾಡಿಕೊಂಡು ಓಡಲು ಸಾಧ್ಯವಾಗಲಿಲ್ಲ. ಆದರೆ ಅವನ ಹಿಂದೆ ಕುಳ್ಳನೊಬ್ಬ ಓಡಿಬರುತ್ತಿದ್ದಾನೆ. ಆತ ಬರುತ್ತಿರುವ ಸೂಚನೆಯೇ ಇರಲಿಲ್ಲ. ಆದರೆ ಆತ ಅಲ್ಲಿದ್ದಾನೆ. ಮುರೊಸ್ಸಿಯ ಕುರುಬ ಸ್ಪಿರಿಡಾನ್. 32 ಕಿ. ಮೀ. ನಂತರ ಅಗ್ರಸ್ಥಾನದಲ್ಲಿದ್ದ ಲೆಮೂರ್ಸಿಯಕ್ಸ್ ಓಡಲಾರದೆ ಪಂದ್ಯದಿಂದ ನಿವೃತ್ತಿಯಾದ.ಆಗ ತಾನೇ ಪ್ರಾರಂಭವಾದ ಇಂಜಿನಿನಂತೆ ಸ್ಪಿರಿಡಾನ್ ಮಾತ್ರ ಸ್ಟಡಿಯಾಗಿ ಓಡುತ್ತಲೇ ಇದ್ದ. ಅವನ ಆ ಓಟದ ಮುಂದೆ ಅಂದು ಯಾವ ಶಕ್ತಿಗಳೂ ನಿಲ್ಲದಾರದಾದವು. ಫ್ಲಾಕ್, ಅಮೆರಿಕನ್, ಆಸ್ಟ್ರೇಲಿಯನ್ ಒಬ್ಬೊಬ್ಬರಾಗಿ ಹಿಂದೆ ಬೀಳತೊಡಗಿದರು. ಸ್ಪಿರಿಡಾನ್ ಲೀಡ್‌ನಲ್ಲಿರುವ ವಿಷಯ ತಿಳಿದು ಸ್ಟೇಡಿಯಂನಲ್ಲಿ ವಿದ್ಯುತ್ ಸಂಚಾರವಾಯಿತು. ದೊರೆ ಜಾರ್ಜ್, ಅವನ ಪರಿವಾರ ತಮ್ಮ ಕಾರ್ಯಗಳನ್ನು ಬಿಟ್ಟು ಸ್ಪಿರಿಡಾನ್ ಟೇಪ್‌ಗೆ ಎದೆಯೊಡ್ಡುವುದನ್ನು ನೋಡಲು ಬಂದರು. ಗ್ರೀಕ್ ಜನತೆಯ ಕಣ್ಣುಗಳಲ್ಲಿ ಆನಂದಬಾಷ್ಪ, ಗಡಚಿಕ್ಕುವ ಚಪ್ಪಾಳೆ ಇವುಗಳ ಮಧ್ಯೆ 'ಮ್ಯಾರಥಾನ್' ವೀರನಾಗಿ ಸ್ಪಿರಿಡನ್ ಟೇಪಿಗೆ ಎದೆಯೊಡ್ಡಿದ. ಸ್ಪಿರಿಡಾನ್ ದೂರದ ಗುಡ್ಡ ಪ್ರದೇಶವೊಂದರಲ್ಲಿ ಬೆಳೆದವನು.ಯಾವುದೇ ಶ್ರೇಷ್ಠ ಪಂದ್ಯಗಳಲ್ಲಿ ಭಾಗವಹಿಸದವನು. ಪಂದ್ಯ ಪ್ರಾರಂಭವಾಗುವ ತನಕ ಅನಾಮಧೇಯನಾಗಿದ್ದವನು. ಆತ ಒಲಂಪಿಕ್ಸ್‌ನ ಕಡೆಯ ದಿನ ಸ್ವರ್ಣ ಪದಕವನ್ನು ಧರಿಸಿ ಒಂದು ಕೈಯಲ್ಲಿ ಆಲಿವ್ ಕೊಂಬೆಯನ್ನೂ ಇನ್ನೊಂದು ಕೈಯಲ್ಲಿ ಗ್ರೀಕ್ ರಾಷ್ಟ್ರ ಧ್ವಜವನ್ನೂ ಹಿಡಿದು ಪರೇಡಿನ ಅಗ್ರಸ್ಥಾನದಲ್ಲಿದ್ದ. ಇದು ಒಲಂಪಿಕ್ಸ್ ವೀರರನ್ನು ಗುರುತಿಸುವ ವಿಧಾನ. ಆತ ಯಾರೇ ಇರಲಿ, ಏನೇ ಇರಲಿ ಒಲಂಪಿಕ್ಸ್ ಗುರುತಿಸುವುದು ಅವನ ಸಾಧನೆಯನ್ನು ಮಾತ್ರ.

ಒಲಂಪಿಕ್ಸ್ ಮಾನವ ಸಾಧನೆಯ ಮಹಾಪ್ರಗಾಥ. ಇಲ್ಲಿ ಶೌರ್ಯ, ಸಾಧನೆಗಳಿಗೆ ಅವಕಾಶವಿದ್ದಂತೆಯೇ ಹಾಸ್ಯ ವಿನೋದಗಳಿಗೂ ದುರಂತಗಳಿಗೂ ಮಿತಿಯಿಲ್ಲ.

ಸೈಂಟ್ ಲೂಯಿಸ್ ಒಲಂಪಿಕ್ಸ್‌ನಲ್ಲಿ ನಡೆದ ಮ್ಯಾರಥಾನ್ ಪಂದ್ಯದಲ್ಲಿ ನಡೆದ ಒಂದು ಹಾಸ್ಯ ಪ್ರಸಂಗವನ್ನು ಇಲ್ಲಿ ಉಲ್ಲೇಖಿಸಬಹುದು. ನ್ಯೂಯಾರ್ಕಿನ ಫ್ರೆಡ್‌ಲೋರ್ಜ್ ಎಂಬುವವನೂ ಓಟಗಾರರಲ್ಲಿ ಒಬ್ಬನಾಗಿದ್ದ. ಓಟ ಪ್ರಾರಂಭವಾದ ನಂತರ ಸ್ವಲ್ಪ ದೂರ ಓಡಿದ ಮೇಲೆ ಆಯಾಸದಿಂದಾಗಿ ಲೋರ್ಜ್ ಕೆಳಗೆ ಬಿದ್ದುಬಿಟ್ಟ.

ಹಾಸ್ಯದ ಉಚ್ಛಾಟನೆ !

ಆಮೇಲೆ ಓಡುವುದನ್ನು ಬಿಟ್ಟು ಕಾರೊಂದರಲ್ಲಿ ಕುಳಿತು ಪಂದ್ಯ ಮುಕ್ತಾಯವಾಗುವ ಸ್ಥಳಕ್ಕೆ ಹೊರಟ. ಇನ್ನೂ ಐದು ಮೈಲಿ ಇರುವಾಗ ಲೋರ್ಜ್‌ಗೆ ಒಂದು ಯೋಚನೆ ಹೊಳೆಯಿತು. ಆತ ಹಾಸ್ಯ ಪ್ರಜ್ಞೆಯವ. ಆಯಾಸದಿಂದ ಚೇತರಿಸಿಕೊಂಡಿದ್ದ. ತನ್ನ ಸ್ನಾಯುಗಳನ್ನು ಬಿಸಿ ಮಾಡಿಕೊಳ್ಳಬೇಕೆಂಬ ಚಪಲ. ಕಾರಿನಿಂದ ಇಳಿದು ದೂರದಿಂದ ಓಡಿಬಂದವನಂತೆ ಆಯಾಸದಿಂದ ಮುಗ್ಗರಿಸುವಂತೆ ನಟಿಸುತ್ತಾ ಓಡತೊಡಗಿದ. ನಿಜವಾದ ಸ್ಪರ್ಧಿಗಳು ಇನ್ನು ಎಷ್ಟು ದೂರದಲ್ಲಿದ್ದರೋ ಏನೋ ? ಇವನು ಮಾತ್ರ ಬಹಳ ಬೇಗ ಗುರಿಯನ್ನು ಮುಟ್ಟಿದ್ದ. ಜನಸಂದಣಿಗೆ ಇವರ ಹಿಂದಿನ ಸತ್ಯದ ಅರಿವಿರಲಿಲ್ಲ. ಹರ್ಷೋದ್ಗಾರಗಳಿಂದ ಅವನನ್ನೇ ವಿಜಯಿ ಎಂದು ಭಾವಿಸಿದರು. ವ್ಯವಸ್ಥಾಪಕರು ಅವನ ಹೆಸರನ್ನು ತಮ್ಮ ಪಟ್ಟಿಯಲ್ಲಿ ಸೇರಿಸಿಕೊಳ್ಳುವುದು, ಅಂಕಿ ತಜ್ಞರು ಅವನು



ಓಟದ ವೇಗಕ್ಕೆ ಕಲಾತ್ಮಕತೆ ತುಂಬುವ

ಎಡ್ವಿನ್ ಮೋಸೆಸ್

1984ರ ಒಲಂಪಿಕ್ಸ್‌ನಲ್ಲಿ 400ಮೀ. ಹರ್ಡಲ್ಸ್‌ನಲ್ಲಿ ದಾಖಲೆ ಸ್ಥಾಪಿಸಿದ ಮೋಸೆಸ್-ಲೂಯಿಸ್ ನಂತರದ ಜನಪ್ರಿಯ ಅಥ್ಲೆಟ್. ಈತ ಇಂಜಿನಿಯರಿಂಗ್ ಪದವೀಧರ ಹಾಗೂ ಒಳ್ಳೆಯ ವಿದ್ವಾಂಸ. ತುಂಬಾ ಸಂಭಾವಿತ ಹಾಗೂ ಜನಾನುರಾಗಿ. ಈತನ ಓಟವನ್ನು ವೀಕ್ಷಿಸುವುದು ಅದ್ಭುತ ಕಾವ್ಯ ಓದಿದ ಹಾಗೆ ಆಗುತ್ತದೆ ಎಂಬುದು ಹಲವರ ಅಭಿಪ್ರಾಯ. ಓಟದಲ್ಲೇ ಲಯ ಹಾಗೂ ಗತಿಗಳನ್ನು ಪ್ರದರ್ಶಿಸುವ ಈತ ಕಲಾವಂತಿಕೆಗೆ ಹೆಸರಾದವ. ತನ್ನ ಅಥ್ಲೆಟಿಕ್ ಅಭ್ಯಾಸದ ಜೊತೆಗೆ ಸಮರಶಾಸ್ತ್ರವನ್ನೂ ಅಭ್ಯಾಸ ಮಾಡಿರುವ ಮೋಸೆಸ್ ನೀಗ್ರೋಗಳು ಕಂಡ ಮಹಾನ್ ಅಥ್ಲೆಟ್ ಹಾಗೂ ಮಹಾನ್ ಸಂಭಾವಿತ.

ಕಪ್ಪು ಒಂದೇ ಭರವಸೆ

ದೂರವನ್ನು ಎಷ್ಟು ನಿಮಿಷದಲ್ಲಿ ಓಡಿದ ಎಂದು ಲೆಕ್ಕ ಹಾಕುವುದು. ಅವನನ್ನು ವಿಜಯಿ ಸ್ಥಾನದ ಕಡೆಗೆ ಕೊಂಡೊಯ್ಯುವುದು ಮುಂತಾದ ಚಟುವಟಿಕೆಗಳು ಆರಂಭವಾದವು. ಆಗ ಆತ ನಿಜವನ್ನು ಹೇಳಲೇಬೇಕಾಯಿತು. ತಾನು ಹಾಸ್ಯಕ್ಕಾಗಿಹಾಗೆ ಮಾಡಿದ್ದೆಂದೂ ಅದರ ಹಿಂದೆ ಯಾವುದೇ ದುರುದ್ದೇಶವೂ ಇಲ್ಲವೆಂದು ತಿಳಿಸಿದ. ಆದರೆ ಅಮೆರಿಕಾದ ಒಲಂಪಿಕ್ಸ್ ಸಂಸ್ಥೆ ಮಾತ್ರ ಅವನನ್ನು ಜೀವನಪರ್ಯಂತ ಒಲಂಪಿಕ್ಸ್‌ನಿಂದ ಉಚ್ಚಾಟಿಸಿತು.

1912ರಲ್ಲಿ ಸ್ಟಾಕ್‌ಹೋಮ್‌ನಲ್ಲಿ ನಡೆದ ಒಲಂಪಿಕ್ಸ್ ಅತ್ಯಂತ ಅದೃಷ್ಟದ ಹಾಗೂ ದುರಾದೃಷ್ಟದ ಅಥ್ಲೀಟ್‌ನನ್ನು ಕಂಡಿತು. ಆ ವ್ಯಕ್ತಿಯೇ ಅಮೆರಿಕಾದ ಫಾಕ್ಸ್ ಬುಡಕಟ್ಟಿನ ಜಿಮ್ ಥೋರ್ಪೆ. ಈತ ಎಲ್ಲಾ ಆಟಗಳಲ್ಲೂ ನಿಪುಣ. ಆದರೆ ಅವನ ಮೆಚ್ಚಿನ ಆಟಗಳೆಂದರೆ ಫುಟ್‌ಬಾಲ್, ಬೇಸ್ ಬಾಲ್ ಮತ್ತು ಓಟ. ಪೆಂಟಥ್ಲಾನ್‌ನಲ್ಲಿ ಆತನಿಗೆ ಯಾವ ಎದುರಾಳಿಗಳೂ ಸಮನಾಗಿರಲಿಲ್ಲ. ಪೆಂಟಥ್ಲಾನ್, ಡೆಕಥ್ಲಾನ್, ಹೈಜಂಪ್, ಶಾಟ್‌ಪುಟ್, ಇಷ್ಟರಲ್ಲೂ ಆತ ಮೊದಲಿಗನಾಗಿ ಬಂದು ಒಲಂಪಿಕ್ಸ್‌ನಲ್ಲಿ ಇತಿಹಾಸ ಪುರುಷನೆನಿಸಿಕೊಂಡ. 1912ರ ಒಲಂಪಿಕ್ಸ್ ಥೋರ್ಪೆಯ ವೈಭವದ ಘಳಿಗೆ. ಅದೇ ಒಲಂಪಿಕ್ಸ್ ಆತನ ದುರಂತದ ಘಳಿಗೆಯೂ ಆದದ್ದು ವಿಪರ್ಯಾಸ.

ಪ್ರಾಮಾಣಿಕತೆಯ ಫಲ !

ಜಿಮ್ ಥೋರ್ಪೆ ಅಥ್ಲೀಟ್ ಪ್ರಪಂಚದ ಹೊಸ ಹೀರೋ ಆಗಿ ವಿಜಯದ ವೇದಿಕೆಯಲ್ಲಿ ನಿಂತಾಗ ಅಂದಿನ ಮುಖ್ಯ ಅತಿಥಿ ರಾಜ ಗಸ್ಟೆವೊ "ಸರ್ ನೀವು ಪ್ರಪಂಚದಲ್ಲೇ ಅತ್ಯಂತ ಶ್ರೇಷ್ಠ ಅಥ್ಲೀಟ್" ಎಂದು ಹೊಗಳಿ ಕೈಕುಲುಕಿ ಬಹುಮಾನ ನೀಡಿದ್ದ. ಆದರೆ ಒಲಂಪಿಕ್ಸ್ ಮುಗಿದ ಒಂದು ವರ್ಷದ ಮೇಲೆ ನಡೆದ ಘಟನೆಗಳು ಥೋರ್ಪೆಯ ದುರಂತದ ಕ್ಷಣಗಳು. ಯಾರೋ ಒಬ್ಬ ಥೋರ್ಪೆ ಹಣಕ್ಕಾಗಿ ಬೇಸ್‌ಬಾಲ್ ಆಡಿದ್ದನೆಂಬುದನ್ನು ಕಂಡು ಹಿಡಿದು ಪ್ರಕಟಿಸಿದ. ಅಥ್ಲೀಟ್ ಪ್ರಪಂಚದಲ್ಲಿ ಭಾರೀ ಕೋಲಾಹಲವೆದ್ದಿತು. ಒಲಂಪಿಕ್ಸ್‌ನಲ್ಲಿ ಭಾಗವಹಿಸುವ ಕ್ರೀಡಾಪಟು ಹವ್ಯಾಸಿ ಕ್ರೀಡಾಪಟುವಾಗಿರಬೇಕೇ ಹೊರತು ವೃತ್ತಿನಿರತನಾಗಿರಬಾರದು ಎಂಬ ಷರತ್ತಿದೆ. ಅದನ್ನು ಉಲ್ಲಂಘಿಸಿದವರು ತೀವ್ರ ಶಿಕ್ಷೆಗೆ ಗುರಿಯಾಗುತ್ತಾರೆ. ಇದರ ಬಗ್ಗೆ ಥೋರ್ಪೆಯನ್ನು ವಿಚಾರಿಸಿದಾಗ ಉತ್ತರ ಕರೋಲಿನಾದ ಚಿಕ್ಕ ಲೀಗ್ ಒಂದರಲ್ಲಿ 25ಡಾಲರ್ ಗಳಷ್ಟು ಅಲ್ಪ ಹಣಕ್ಕೆ ತಾನು ಆಡಿದ್ದು ನಿಜವೆಂದು ವಿನಯದಿಂದ ಉತ್ತರಿಸಿದ. ಒಲಂಪಿಕ್ಸ್‌ನ ಪವಿತ್ರತೆಯನ್ನು ಹಾಳುಮಾಡಿದವನೆಂದು ಅವನನ್ನು ದೂಷಿಸಲಾಯಿತು. ಅವನಿಗೆ ಕೊಟ್ಟಿದ್ದ ಎಲ್ಲಾ ಪದಕಗಳನ್ನೂ ಬಲಾತ್ಕಾರದಿಂದ ಹಿಂದಕ್ಕೆ ಪಡೆದದ್ದಷ್ಟೇ ಅಲ್ಲ ಅವನು ಸ್ಥಾಪಿಸಿದ ವಿಕ್ರಮಗಳನ್ನೆಲ್ಲಾ ಒಲಂಪಿಕ್ಸ್ ದಾಖಲೆಯಿಂದ ಅಳಿಸಿ ಹಾಕಲಾಯಿತು. ಇಂದು ಜಿಮ್ ಥೋರ್ಪೆಯ ಹೆಸರು ಒಲಂಪಿಕ್ ದಾಖಲೆಯಲ್ಲಿಲ್ಲ ನಿಜ, ಆದರೆ ಅವನ ಆ ಚೈತನ್ಯ ಮಾತ್ರ ಇಂದು ಎಷ್ಟೋ ಸ್ಪರ್ಧಿಗಳಿಗೆ ಸ್ಫೂರ್ತಿದಾಯಕವಾಗಿದೆ. ಥೋರ್ಪೆ ತನ್ನ ಸರಳ ಹಾಗೂ ಮುಗ್ದ ಶೈಲಿಯಲ್ಲಿ ಆ ಘಟನೆಯನ್ನು ಹೀಗೆ ಬಣ್ಣಿಸಿದ್ದಾನೆ: "ಪ್ರಾಪಂಚಿಕವ್ಯವಹಾರದ ದೃಷ್ಟಿಯಿಂದ ನಾನು ಅಷ್ಟೊಂದು ಬುದ್ಧಿವಂತನಾಗಿರಲಿಲ್ಲ. ನಾನು ಇಂಡಿಯನ್ ಶಾಲಾ ವಿದ್ಯಾರ್ಥಿಯಾಗಿದ್ದೆ ಮತ್ತು ಹಣಕ್ಕಾಗಿ ಆಡುವುದು ನನ್ನ ಬಡತನ ನೀಗಲು ಅವಶ್ಯವಾಗಿತ್ತು. ನನ್ನಿಂದೇನಾದರೂ ತಪ್ಪಾಗಿದ್ದರೆ ದಯವಿಟ್ಟು ನನ್ನನ್ನು ಕ್ಷಮಿಸಿ." 1932ರಲ್ಲಿ ಲಾಸ್ ಏಜಂಲ್ಸ್‌ನಲ್ಲಿ ನಡೆದ ಒಲಂಪಿಕ್ಸ್ ಪಂದ್ಯದ ಹೊತ್ತಿಗೆ ಥೋರ್ಪೆ ತುಂಬಾ ಬಡವನಾಗಿದ್ದ. ಚಿಂದಿಬಟ್ಟೆಯುಟ್ಟು, ಗೆಳೆಯರುಗಳಿಲ್ಲದೆ, ಒಳಕ್ಕೆ ಹೋಗಲು ಟಿಕೆಟ್‌ಗಾಗಿ ಹಣವಿಲ್ಲದೆ ಪರದಾಡುತ್ತಿದ್ದ. ಒಮ್ಮೆ ಇಡೀ ಜಗತ್ತಿನಾದ್ಯಂತ ಅಭಿಮಾನಿಗಳ ಪೂರವನ್ನೇ ಸಂಪಾದಿಸಿದ್ದ ಮಹಾನ್ ಅಥ್ಲೀಟ್ ಒಬ್ಬ ಇಂಥ ದುರಂತವನ್ನು ಕಾಣಬೇಕಾದ್ದು ಅತ್ಯಂತ ದುರಾದೃಷ್ಟ. ಜಗತ್ತಿನ ಬುದ್ಧಿ ಜೀವಿಗಳು, ಲೇಖಕರು ಅವನ ಪರವಾಗಿ ಎಷ್ಟೇ ವಾದ ಮಾಡಿದರೂ ಸಾಧ್ಯವಾಗಲಿಲ್ಲ. 1953ರಲ್ಲಿ ಅತ್ಯಂತ ದರಿದ್ರ ಸ್ಥಿತಿಯಲ್ಲಿ ಥೋರ್ಪೆ ತೀರಿಕೊಂಡಾಗ ಆತ ಜನರ ಮನಸ್ಸಿನಿಂದ ದೂರವಾಗಿದ್ದ.

1936ರ ಬರ್ಲಿನ್ ಒಲಂಪಿಕ್ಸ್ ಅನೇಕ ದೃಷ್ಟಿಗಳಿಂದ ಚರಿತ್ರಾರ್ಹವಾದುದು. ಅದು ಹಿಟ್ಲರನ ಪಾಶವೀ ಕೃತ್ಯದ ಕಾಲ. ಆರ್ಯ ಜನಾಂಗವೇ ಜಗತ್ತಿನ ಶ್ರೇಷ್ಠ ಕುಲ ಎಂದು ಸಾರಲು ಹೊರಟಿದ್ದ ಮೂರ್ಖನೊಬ್ಬನ ಹಮ್ಮಿಗೆ ಪೆಟ್ಟು ಕೊಟ್ಟ ಈ ಪಂದ್ಯ ಜೆಸ್ಸಿ ಓವನ್ಸ್‌ನಂಥ ನೀಗ್ರೋ ಅಥ್ಲೀಟ್‌ನನ್ನು ಸೃಷ್ಟಿಸಿದ ನಿರ್ಣಾಯಕ ಪಂದ್ಯ. ಈ ಒಲಂಪಿಕ್ಸ್ ಹೊತ್ತಿಗಾಗಲೇ ಅಮೆರಿಕಾದ ಕ್ರೀಡಾ ಜಗತ್ತಿನಲ್ಲಿ ನೀಗ್ರೋಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲಾರಂಭಿಸಿದ್ದರು. ಆದರೆ ಹಿಂದಿನ ಯಾವ ಒಲಂಪಿಕ್ಸ್ ಪಂದ್ಯದಲ್ಲೂ ಹೇಳಿಕೊಳ್ಳುವಂತಹ ಅದ್ಭುತ ಮಟ್ಟವನ್ನು ಯಾರೂ ಪ್ರದರ್ಶಿಸಿರಲಿಲ್ಲ.

ಸರ್ವಾಧಿಕಾರಿಗೆ ಸವಾಲು

ಆದ್ದರಿಂದ ಅಮೆರಿಕಾ ಟೀಮಿನಲ್ಲಿಯೂ ಅವರಿಗೆ ಅಂಥ ಮಹತ್ವದ ಸ್ಥಾನಗಳೇನೂ ಇರಲಿಲ್ಲ. ತಮ್ಮ



ಹಿಟ್ಲರನ ನಡುಗಿಸಿ ದಂತಕಥೆಯಾಗಿರುವ ಒಲಂಪಿಕ್ಸ್ ವೀರ ಜೆಸ್ಸಿ ಓವನ್ಸ್

ಕಪ್ಪು ಒಂದೇ ಭರವಸೆ

ಸ್ದಾರಿಯನ್ನು ಹೊಂದಿದ್ದ. ಆತ ಒಂದು ಜನಾಂಗದ ಮಾನವೀಯುತೆಯ, ಅಮಾಯಕತೆಯ, ಬಡತನದ ಪ್ರತೀಕವಾಗಿ ಅಂದು ನಿಂತಿದ್ದ. ಕಾರ್ಲ್ ಲೂಯಿಸ್ ಇಂದು ತನ್ನ ಯಶಸ್ಸನ್ನು ಓವನ್ಸ್‌ಗೆ ಅರ್ಪಿಸಿದ್ದಾನೆ. ಅದು ನಿಜ ಸಹ. ಅದರ ಪ್ರತೀಕವಾಗಿ ತಾನು ಗೆದ್ದ ಒಂದು ಸ್ವರ್ಣ ಪದಕವನ್ನು ಓವನ್ಸ್‌ನ ವಿಧವೆ ಪತ್ನಿಗೆ ಕೊಟ್ಟಿದ್ದಾನೆ. ಕಾರ್ಲ್ ಮತ್ತು ಜೆಸ್ಸಿಯ ಮಧ್ಯೆ ಅನೇಕ ಸಾಮ್ಯಗಳಿರುವಂತೆಯೇ ಅನೇಕ ವ್ಯತ್ಯಾಸಗಳೂ ಇವೆ. ಜೆಸ್ಸಿ ಬಡತನದ ಹಿನ್ನೆಲೆಯಿಂದ ಬಂದವನು. ಕಾರ್ಲ್ ಶ್ರೀಮಂತ ಹಿನ್ನೆಲೆಯಿಂದ ಬಂದವನು. ಲೂಯಿಸ್ ಹಾಡುಗಾರ, ನಟ. ಈಗಾಗಲೇ ಸಾಕಷ್ಟು ಹಣ ಸಂಪಾದಿಸಿದವ್ಯಕ್ತಿ. ಓವನ್ಸ್ ತುಂಬಾ ಮೃದುಸ್ವಭಾವದವ. ಲೂಯಿಸ್ ಅಹಂಕಾರಿ, ಒರಟು ಸ್ವಭಾವದವ. ಆದರೆ ಇಬ್ಬರಿಗೂ ಕ್ರೈಸ್ತ ಧರ್ಮದಲ್ಲಿ ಅಸಮಾನ್ಯ ನಂಬಿಕೆ. ತಮ್ಮ ಯಶಸ್ಸಿಗೆ ದೇವರೇ ಕಾರಣ ಎಂಬ ನಿಲುವು. ಇವರಿಬ್ಬರ ನಂಬಿಕೆಗಳು ಬರೀ ವ್ಯಕ್ತಿಗತ ನಂಬಿಕೆಗಳಲ್ಲ. ಅವು ಅಲ್ಲಿಯ ನೀಗ್ರೋಗಳ ನಂಬಿಕೆಯು ಸಹ. ಜೆಸ್ಸಿಯಿಂದ ಹಿಡಿದು ಲೂಯಿಸ್‌ನವರೆಗಿನ ನೀಗ್ರೋಗಳ ಈ ಚೈತನ್ಯ ಅ ಮೆ ರಿ ಕ ನ್ ಅಥ್ಲೆಟ್‌ಗಳಲ್ಲಿ ಹೊಸದೊಂದು ಶಕೆಯನ್ನಾರಂಭಿಸಬೇಕಾಗಿದೆ. ಇಂದಿಗೂ ಎರಡನೆಯ ದರ್ಜೆಯ ನಾಗರೀಕರಾಗೇ ಬದುಕುತ್ತಿರುವ ನೀಗ್ರೋಗಳು ಅಮೆರಿಕಾದಲ್ಲಿ ಅನೇಕ ಪ್ರಥಮ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ವರ್ಣದ್ವೇಷ ಅಲ್ಲಿ ಇನ್ನೂ ತನ್ನ ಪಾಶವೀ ಕೃತ್ಯಗಳನ್ನು ನಡೆಸುತ್ತಲೇ ಇದೆ. ದೈಹಿಕವಾಗಿ ಹಾಗೂ ಬೌದ್ಧಿಕವಾಗಿ ನೀ ಗ್ರೋ ಗ ಳು ಇಂದು ಎಲ್ಲಾ ಕ್ಷೇತ್ರಗಳಲ್ಲೂ ಬಿಳಿಯರಿಗೆ ಸವಾಲಾಗಿದ್ದಾರೆ. ಕ್ರೀಡೆಯಂಥ ಕ್ಷೇತ್ರಗಳಲ್ಲಿ, ಸಂಗೀತ, ನಾಟಕದಂಥ ಕ್ಷೇತ್ರಗಳಲ್ಲಿ ಕಪ್ಪು ಜನರು ಅಸಮಾನ್ಯ ಪ್ರತಿಭೆಯಿಂದ ಮುಂದೆ ಬರುತ್ತಿದ್ದಾರೆ. ಒಲಂಪಿಕ್ಸ್‌ನಲ್ಲಿ ಇಂದು ಅಮೆರಿಕಾದ ಧ್ವಜ ಮೇಲುತ್ತಿರುವುದಕ್ಕೆ ಕಾರಣ ಅನೇಕ ನೀಗ್ರೋಗಳು. ಜೆಸ್ಸಿಯಿಂದ ಹಿಡಿದು ವಿಲ್ಮರುಡಾಲ್ಫ್, ಟಾಮಿಸ್ಮಿತ್, ಶುಗರ್‌ರೇ, ಲಿಯೊನಾರ್ಡ್, ಜಸ್ಮಿನ್ ಕ್ಯಾಸಿಯಸ್‌ಕ್ಲೇ, ಮೋಸೆಸ್, ಲೂಯಿಸ್‌ವರೆಗೆ ಎಲ್ಲರೂ ಧ್ರುವ ತಾರೆಗಳೇ. ತಮ್ಮ ಜನಾಂಗಕ್ಕೆ ಗೌರವ ತಂದ ಮಹನೀಯರು. ಮಾನವೀಯತೆಯನ್ನು ಎತ್ತಿ ಹಿಡಿದವರು. ಮ್ಯೂನಿಚ್ ಒಲಂಪಿಕ್ಸ್‌ನಲ್ಲಿ ನಡೆದ ದುರಂತವನ್ನು ಖಂಡಿಸಿ ಅವರ ವಿರುದ್ಧ ದನಿ ಎತ್ತಿದ ಮೊದಲ ಅಥ್ಲೆಟ್ ಜೆಸ್ಸಿ ಓವನ್ಸ್. ಅಮಾಯಕ ಅಥ್ಲೆಟ್‌ಗಳು ನಿರ್ದಯಿ ರಾಜಕಾರಣಕ್ಕೆ ಬಲಿಯಾಗಿ ದುರಂತ ಸಾವನ್ನಪ್ಪಿದಾಗ ಸಣ್ಣ ಮಗುವಿನಂತೆ ಗಳಗಳನೆ ಅತ್ತ ಜೆಸ್ಸಿ ಓವನ್ಸ್ ದೇವರೇ ಈ ಕ್ಷುದ್ರ ರಾಜಕೀಯದಿಂದ ಮಾನವ ಕುಲಕ್ಕೇ ಬಿಡುಗಡೆ ಎಂದು? ಅಂತ ಹೇಳಿದ್ದು ಇಂದಿಗೂ ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ಅಮೆರಿಕಾದಲ್ಲಿ ವರ್ಣೀಯರನ್ನು ಎರಡನೇ ದರ್ಜೆಯ ನಾಗರೀಕರನ್ನಾಗಿ ನಡೆಸಿಕೊಳ್ಳುವುದರ ವಿರುದ್ಧ ಪ್ರತಿಭಟಿಸಿದ ಕ್ಯಾಸಿಯಸ್ ಕ್ಲೇ ತನ್ನ ಹೆಸರನ್ನು ಮಹಮದ್ ಆಲಿ ಎಂದು ಬದಲಾಯಿಸಿಕೊಂಡದ್ದಷ್ಟೇ ಅಲ್ಲ ತನಗೆ ಬಂದ ಚಿನ್ನದ ಪದಕವೊಂದನ್ನು ನದಿಗೆ ಬಿಸಾಡಿದ. ಬರೀ ಒಲಂಪಿಕ್ಸ್‌ನಲ್ಲಷ್ಟೇ ಅಲ್ಲ, ಬಾಕ್ಸಿಂಗ್ ಮುಂತಾದ ಇನ್ನಿತರ ಕ್ರೀಡೆಗಳಲ್ಲೂ ವರ್ಣೀಯರು ಅಲ್ಲಿ ಸಾಧಿಸಿದ ವಿಕ್ರಮ ಅಪಾರವಾದದ್ದು. ಆದರೆ ಕ್ರೀಡೆಗಳಲ್ಲಿ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಾತ್ರ ತಮ್ಮ ದೇಶದ ಹಿರಿಮೆಯನ್ನು ಜಗಜ್ಜಾಹಿರುಪಡಿಸಿಕೊಳ್ಳುವುದಕ್ಕೆ ನೀಗ್ರೋಗಳನ್ನ ಬಳಸಿಕೊಳ್ಳುವ ಅಮೆರಿಕಾ ಇನ್ನಿತರ ಕ್ಷೇತ್ರಗಳಲ್ಲಿ ಅವರನ್ನು ತುಳಿಯುವುದನ್ನು ನಿಲ್ಲಿಸಬೇಕು. ಒಲಿಂಪಿಕ್ಸ್‌ನ ನಿಜವಾದ ಪ್ರ ಣಾ ಳಿ ಕೆ ಜಾತಿ, ವರ್ಣ, ದೇಶ, ಕುಲ, ಜನಾಂಗಗಳನ್ನು ಮೀರಿದ ಶ್ರೇಷ್ಠ ತಳಿಗಳನ್ನು ಗುರುತಿಸುವುದಾಗಿದೆ. ಅದು ಇನ್ನಿತರ ಕ್ಷೇತ್ರಗಳ ಪ್ರಣಾಳಿಕೆಯೂ ಆಗಬೇಕು. ಈ ನಿಟ್ಟಿನಲ್ಲಿ ಕ್ರೀಡಾಕ್ಷೇತ್ರ ಮಿಕ್ಕೆಲ್ಲಾ ಕ್ಷೇತ್ರಕ್ಕೂ ಮಾದರಿಯಾದರೆ ಒಳಿತು.

ವಿಜಯದ ವೇದಿಕೆಯ ಮೇಲೆ ಕಪ್ಪು ಪ್ರತಿಭಟನೆ

1968ರ ಮೆಕ್ಸಿಕೋ ಒಲಂಪಿಕ್ಸ್ ನೀಗ್ರೋ ಜನಾಂಗದ ಪ್ರತಿಭಟನೆಗೆ ಮಹತ್ತರ ತಿರುವು ನೀಡಿದ ಪಂದ್ಯ. ಅದೆಲ್ಲಾ ಪ್ರಾರಂಭವಾದದ್ದು ಟಾಮಿ ಸ್ಮಿತ್ ಎಂಬ ನೀಗ್ರೋ ಅಥ್ಲೆಟ್ 200 ಮೀಟರ್ ದೂರದ ಓಟದಲ್ಲಿ ಚಿನ್ನದ ಪದಕ ಗೆದ್ದಾಗ, ಅಮೆರಿಕಾದ ನೀಗ್ರೋ ಅಥ್ಲೆಟ್‌ಗಳು ತಮ್ಮ ದೇಶದಲ್ಲಿ ವರ್ಣೀಯರಿಗಾಗುತ್ತಿರುವ ಅನ್ಯಾಯ, ಶೋಷಣೆ, ದಬ್ಬಾಳಿಕೆಗಳನ್ನು ಪ್ರತಿಭಟಿಸುತ್ತಾರೆಂಬ ಪಿಸಿಪಿಸಿ ಸುದ್ದಿ ಅಲ್ಲಲ್ಲಿ ಹರಡಿತ್ತು. ಆದರೆ ಯಾರಿಗೂ, ಹೇಗೆ ಪ್ರತಿಭಟನೆ ವ್ಯಕ್ತವಾಗುತ್ತದೆಂಬುದರ ಸುಳಿವು ಇರಲಿಲ್ಲ. ಇನ್ನು ಕೆಲವರಿಗೆ ಈ ಊಹಾಪೋಹಗಳು ಹಾಗೇ ತಣ್ಣಗಾಗುತ್ತವೆಂಬ ನಂಬಿಕೆ ಇತ್ತು. ಆದರೆ, ಕಡೆಗೊಮ್ಮೆ ಆ ಗಳಿಗೆ ಬಂದೇಬಿಟ್ಟಿತು. ಟಾಮಿಸ್ಮಿತ್ 19.8 ಸೆಕೆಂಡುಗಳಲ್ಲಿ 200 ಮೀಟರ್ ದೂರ ಓಡುವುದರೊಂದಿಗೆ ಚಿನ್ನದ ಪದಕ ಗಳಿಸಿದ. ಇನ್ನೊಬ್ಬ ನೀಗ್ರೋ ಜಾನ್ ಕಾರ್ಲೊಸ್ ಮೂರನೇ ಸ್ಥಾನ ಗಳಿಸಿ ಕಂಚಿನ ಪದಕ ಪಡೆದ. ವಿಜಯದ ವೇದಿಕೆಯನ್ನು ಹತ್ತಿ ನಿಂತಾಗ ಅವರಿಬ್ಬರೂ ತಮ್ಮ ವರ್ಣಶ್ರೇಷ್ಠತೆಯನ್ನು ಪ್ರದರ್ಶಿಸುವುದಕ್ಕಾಗಿ ಕೈಗಳಿಗೆ ಕಪ್ಪು ಗ್ಲೌಸ್‌ಗಳನ್ನು ಧರಿಸಿ ಕೈ ಬೀಸಿದರು. ಅಮೆರಿಕನ್ ರಾಷ್ಟ್ರಗೀತೆ ಪ್ರಾರಂಭವಾದಾಗ ಅವರಿಬ್ಬರೂ ತಮ್ಮ ಕೈಗಳನ್ನು ಮೇಲೆತ್ತಿ ಕತ್ತು ಬಗ್ಗಿಸಿ ನಿಂತರು. ಇದರಿಂದ ಅಮೆರಿಕನ್ ಅಧಿಕಾರಿಗಳು ಹಾಗೂ ಒಲಂಪಿಕ್ಸ್ ನಿರ್ವಾಹಕರು ಅವಾಕ್ಕಾದರು. ಕೂಡಲೇ ಅವರಿಬ್ಬರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಅಮೆರಿಕನ್ನರು ಒತ್ತಾಯಿಸಲಾರಂಭಿಸಿದರು. ಬರೀ ಕ್ಷಮಾಪಣೆಯಷ್ಟೇ ಸಾಲದು, ಅವರನ್ನು ಒಲಂಪಿಕ್ಸ್ ಕೂಟದಿಂದಲೇ ಉಚ್ಚಾಟಿಸಬೇಕೆಂಬ ಒತ್ತಾಯ ಮುಂದಿಡಲಾಯಿತು. ಅದಕ್ಕೆ ಬಗ್ಗಿದ ಅಮೆರಿಕಾ ಒಲಂಪಿಕ್ಸ್ ಮಂಡಳಿ ಅವರಿಬ್ಬರನ್ನೂ ಸಸ್ಪೆಂಡ್ ಮಾಡಿ ವಾಪಸ್ ಕಳಿಸಿತು. ಅಮೆರಿಕಾ ಕಪ್ಪು ಅಥ್ಲೆಟ್‌ಗಳನ್ನು ನಡೆಸಿಕೊಂಡ ರೀತಿ ಇದು. ಅವರು ಗಳಿಸುವ ಕೀರ್ತಿ ದೇಶದ್ದಾಗಬೇಕು, ಆದರೆ ಅವರಿಗೆ ಸಮಾನ ಸೌಲಭ್ಯ ನೀಡುವ ಕರ್ತವ್ಯ ತನ್ನದಲ್ಲ ಎಂಬ ಅಮೆರಿಕದ ಇಬ್ಬಗೆಯ ಜನಾಂಗ ನೀತಿಯಿಂದಾಗಿ ನೊಂದ ಅಭಿಮಾನಿ ಅಥ್ಲೆಟ್‌ಗಳು ಎಷ್ಟೋ ಜನ. ಅವರಿಬ್ಬರೂ ತಮ್ಮನ್ನು ಉಚ್ಚಾಟಿಸಿದ್ದರ ಬಗ್ಗೆ ಪ್ರತಿಭಟಿಸಿ ತಾವು ವಾಪಸ್ ಹೋಗುವುದಿಲ್ಲ ಎಂದಾಗ ಅವರ ಗುರುತಿನ ಕಾರ್ಡುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಅದರಿಂದ ಅನಿವಾರ್ಯವಾಗಿ ಅವರು ವಾಪಸ್ ಹೋಗಲೇ ಬೇಕಾಯಿತು. ಆದರೆ ಈ ಪ್ರತಿಭಟನೆ ಅಷ್ಟಕ್ಕೇ ನಿಲ್ಲಲಿಲ್ಲ. 400 ಮೀಟರ್ ಓಟದ ಸ್ಪರ್ಧೆಯಲ್ಲಿ ಲ್ಯಾರಿ ಜೇಮ್ಸ್ ಎಂಬ ನೀಗ್ರೋ ಚಿನ್ನದ ಪದಕ ಗಳಿಸಿದ. ಎರಡನೆ ಹಾಗೂ ಮೂರನೇ ಸ್ಥಾನ ಗಳಿಸಿದ ಲೀ ಇವಾನ್ಸ್, ರಾನ್ ಫ್ರೀಮನ್ ಸಹ ನೀಗ್ರೋಗಳು. ಹಾಗಾಗಿ ಅಮೆರಿಕನ್ನರಿಗೆ ಮುಖ್ಯವಾಗಿ ನೀಗ್ರೋಗಳಿಗೆ ಈ ಪಂದ್ಯ ಕೊಳ್ಳಿಯಾದಂತಾಗಿತ್ತು. ಮೂವರೂ ವಿಜಯದ ವೇದಿಕೆಗೆ ಬಂದಾಗ ಮತ್ತೆ ಹಳೆಯ ಕಥೆ ಪುನರಾವೃತ್ತಿಯಾಗುತ್ತದೆಂದು ಬಹಳಷ್ಟು ಜನ ನಿರೀಕ್ಷಿಸಿರಲಿಲ್ಲ. ಮೂವರು ವೇದಿಕೆ ಹತ್ತಿದ ತಕ್ಷಣ ತಮ್ಮ ಕೈಗೆ ಕಪ್ಪುಕವಚ ಧರಿಸಿ ಪ್ರೇಕ್ಷಕರ ಕಡೆ ಕೈಬೀಸಿದರು. ಮತ್ತೊಂದು ಅಪ್ರಿಯ ಘಟನೆ ನಿರೀಕ್ಷಿಸಿ ಪ್ರೇಕ್ಷಕರ ಎದೆಬಡಿತ ತೀವ್ರವಾಯಿತು. ಆದರೆ ಅಮೆರಿಕ ರಾಷ್ಟ್ರಗೀತೆ ಪ್ರಾರಂಭವಾದ ತಕ್ಷಣ ಅವರು ಕೈಗವಚ ಕಳಚಿದರು. ತಮ್ಮ ತಲೆ ಮೇಲೆತ್ತಿ ನಿಂತರು. ಅಲ್ಲಿಯವರೆಗೂ ಹಿಡಿದಿಟ್ಟುಕೊಂಡಿದ್ದ ಪ್ರೇಕ್ಷಕರ ಉಸಿರು ನಿಧಾನವಾಗಿ ಆಡತೊಡಗಿತು.

ಸೀಮಿತ ಅವಕಾಶಗಳಲ್ಲಿ ಎಲ್ಲಾ ನೋವು ಅಪಮಾನಗಳ ಪರಿಧಿಯಲ್ಲಿ ಅವರು ತಮ್ಮ ಪ್ರತಿಭೆಯನ್ನು ಮಾತ್ರ ನೆಚ್ಚಿಕೊಂಡು ಸ್ಪರ್ಧಿಸುತ್ತಿದ್ದರು. ಹಿಟ್ಲರ್‌ಗೆ ಈ ಪಂದ್ಯದಲ್ಲಿ ಆರ್ಯ ಜನಾಂಗವೇ ಶ್ರೇಷ್ಠ ಎಂದು ವಾದಿಸಬೇಕಾಗಿತ್ತು. ಅದಕ್ಕಾಗಿ ತುಂಬಾ ರಹಸ್ಯವಾಗಿ ಹೊರ ಜಗತ್ತಿಗೆ ಸುಳಿವು ಕೊಡದೆ ಸರ್ವಾಂಗೀಣ ಅಥ್ಲೆಟ್ ಒಬ್ಬನಿಗೆ ತರಬೇತಿ ಕೊಡಿಸುತ್ತಿದ್ದ. ಆ ಅಥ್ಲೆಟ್‌ನನ್ನು ಎಲ್ಲರೂ ಚಕಿತಗೊಳ್ಳುವಂತೆ ಪಂದ್ಯದಲ್ಲಿ ಪ್ರದರ್ಶಿಸಬೇಕೆಂಬ ಇಚ್ಛೆ ಅವನದು.

ಅಮೇರಿಕನ್ ಟೀಮಿನಲ್ಲಿ ಹತ್ತು ಜನ ಕಪ್ಪು ವರ್ಣೀಯ ಅಥ್ಲೀಟ್‌ಗಳಿದ್ದರು. ಕಪ್ಪು ವರ್ಣೀಯರಿದ್ದಾರೆಂದು ತಿಳಿದ ಹಿಟ್ಲರ್ "ಆ ಕಪ್ಪು ಸೊಳ್ಳೆಗಳು" (Black auxillaries) ಎಂದು ಜರಿದಿದ್ದ. ಆದರೆ 'ಆ ಕಪ್ಪು ಸೊಳ್ಳೆಗಳೇ' ಎಂಟು ಚಿನ್ನದ ಪದಕಗಳು; ಮೂರು ಬೆಳ್ಳಿ ಪದಕಗಳು ಮತ್ತು ಎರಡು ಕಂಚಿನ ಪದಕಗಳನ್ನು ಸೂರೆ ಹೊಡೆದಿದ್ದಷ್ಟೇ ಅಲ್ಲ, ಆ ಕಪ್ಪು ಸೊಳ್ಳೆಗಳಲ್ಲಿ ಒಬ್ಬನಾದ ಜೆಸ್ಸಿ ಓವನ್ಸ್ ಒಟ್ಟಿಗೇ ನಾಲ್ಕು ಸ್ವರ್ಣ ಪದಕಗಳನ್ನು ಗಳಿಸುವುದರ ಮೂಲಕ ಹಿಟ್ಲರ್‌ಗೆ ಸವಾಲಾದ. ಬಹುಶಃ ಯಾವುದೇ ದೇಶ ಅಥವಾ ಯಾವುದೇ ರಾಷ್ಟ್ರೀಯ ನಾಯಕ ಹಿಟ್ಲರ್‌ಗೆ ಜೆಸ್ಸಿ ಓವನ್ಸ್‌ನಷ್ಟು ಸವಾಲು ಹಾಕಿ ಜಗ್ಗಿಸಿದ ಉದಾಹರಣೆಗಳಿಲ್ಲ.

ಓವನ್ಸ್ ದಂತಕಥೆ

ಜೆಸ್ಸಿ ಓವನ್ಸನ ದಂತಕಥೆ ಆರಂಭವಾದದ್ದು 1935, ಮೇ 25ರಂದು. ತಾನು ಓದುತ್ತಿದ್ದ ವಿಶ್ವವಿದ್ಯಾನಿಲಯದಲ್ಲಿ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿದ. ಎರಡು ಗಂಟೆಗಳ ಅವಧಿಯಲ್ಲಿ 100 ಗಜದ ಓಟ, 220ಗಜದ ಓಟ, 220 ಗಜದ ಹರ್ಡಲ್ಸ್ ಓಟ ಮತ್ತು ಲಾಂಗ್ ಜಂಪ್‌ಗಳಲ್ಲಿ ಪ್ರಥಮ ಸ್ಥಾನ ಪಡೆಯುವುದರ ಮೂಲಕ ಅಮೇರಿಕಾದ ಹಿಂದಿನ ಎಲ್ಲಾ ದಾಖಲೆಗಳನ್ನೂ ಅಳಿಸಿಹಾಕಿದ. ಈ ಪಂದ್ಯವೇ ಅವನನ್ನು ಒಲಂಪಿಕ್ಸ್‌ಗೆ ಅರ್ಹನನ್ನಾಗಿಸಿದ್ದು. 1936 ಆಗಸ್ಟ್ ಮೂರರಂದು ಆತ ಬರ್ಲಿನ್‌ನ ಒಲಂಪಿಕ್ಸ್ ಕ್ರೀಡೆಯಲ್ಲಿ 100 ಮೀಟರ್ ಓಟದ ಗೆರೆಗಳ ಮಧ್ಯೆ ನಿಂತಾಗ ಅವನ ಕಣ್ಣುಗಳು ಹೊಳೆಯುತ್ತಿದ್ದವು. ಅವನ ಜೊತೆ ಸ್ಪರ್ಧಿಗಳು ಮೂವರು ಅಮೇರಿಕನ್ನರು, ಒಬ್ಬ ಜರ್ಮನ್, ಒಬ್ಬ ಡಚ್ ಮತ್ತು ಒಬ್ಬ ಸ್ವೀಡನ್. ಓವನ್ಸ್ ಬುಲೆಟ್‌ನಂತೆ ಹೊರಟವನು ಟೇಪಿಗೆ ಎದೆಯೊಡ್ಡಿದಾಗ ಎಲ್ಲರಿಗಿಂತ ಒಂದು ಮೀಟರ್ ಮುಂದಿದ್ದ. ಮಾರನೆ ದಿನ ಲಾಂಗ್‌ಜಂಪ್. ಬೆಳಿಗ್ಗೆ ಅರ್ಹತಾ ಸುತ್ತಿನಲ್ಲಿ ನೆಗೆದ ಅತ್ಯಂತ ಹೆಚ್ಚಿನ ದೂರ 23 ಅಡಿ 5½ ಅಂಗುಲ. ಓವನ್ಸ್ ಎರಡು ಬಾರಿ ಫೌಲ್ ಆದ. ಬಹುಶಃ ಅಂದು ಆತನಿಗೆ ತುಂಬಾ ನಿರಾಸೆಯಾಗಿರಬೇಕು. ಆದರೆ ಎದೆಯ ಮೂಲೆಯಲ್ಲೆಲ್ಲೋ ಹಿಟ್ಲರ್ ಹಂಗಿಸಿದ ಮಾತುಗಳು ರಣಗುಡುತ್ತಿದ್ದವು. ಅಷ್ಟು ಹೊತ್ತಿಗೆ ಹಿಟ್ಲರ್ ತಯಾರು ಮಾಡಿದ ಅಥ್ಲೆಟ್ ಓವನ್ಸ್‌ನ ಭುಜದ ಮೇಲೆ ಕೈಹಾಕಿ, ಆತ್ಮವಿಶ್ವಾಸ ತುಂಬುತ್ತಾ ಮತ್ತೊಮ್ಮೆ ಪ್ರಯತ್ನ ಮಾಡುವಂತೆ ಹೇಳಿದ. ಹಿಟ್ಲರ್‌ಗೆ ವರ್ಣದ್ವೇಷ ಇತ್ತೇ ಹೊರತು ಆ ಅಥ್ಲೆಟ್‌ಗೆ ಇರಲಿಲ್ಲ. ಬಹುಶಃ ಆ ಸಾಂತ್ವನದ ಮಾತುಗಳೇ ಓವನ್ಸ್‌ಗೆ ಮರು ಚೈತನ್ಯ ನೀಡಿರಬೇಕು. ಮರು ಪ್ರಯತ್ನ ಫಲ ನೀಡಿತು. ಒಂದು ಗಜದ ಅಂತರದಲ್ಲಿ ಆತ ಅರ್ಹತಾ ಸುತ್ತಿನಲ್ಲಿ ಆಯ್ಕೆಯಾದ. ಅನಂತರ ಫೈನಲ್ಸ್‌ನಲ್ಲಿ ಜೆಸ್ಸಿ ನೆಗೆದದ್ದು 26ಅಡಿ 5 ಕಾಲು ಅಂಗುಲ.ಅದು ಅಂದಿನ ದಾಖಲೆ. ಆ ಮೂಲಕ ಎರಡನೇ ಚಿನ್ನದ ಪದಕ ಆತನ ಪಾಲಾಯಿತು. ಮಾರನೇ ದಿನ 200 ಮೀಟರ್ ಓಟದಲ್ಲಿ ಮತ್ತೊಂದು ವಿಕ್ರಮ. ಮೂರನೇ ಚಿನ್ನದ ಪದಕ. ಕೆಲವು ದಿನಗಳ ನಂತರ 400 ಮೀಟರ್ ರಿಲೇ ಟೀಮಿನಲ್ಲಿ ಒಬ್ಬನಾದ ಜೆಸ್ಸಿ ನಾಲ್ಕನೇ ಚಿನ್ನದ ಪದಕ ಗಳಿಸಿದ. ಅಲ್ಲಿಯವರೆಗೆ ನೀಗ್ರೋಗಳಿಗಿಲ್ಲದ ಒಂದು ಸ್ಥಾನವನ್ನು ಜೆಸ್ಸಿ ನೀಗ್ರೋಗಳಿಗೆ ತಂದುಕೊಟ್ಟ.ಬಹುಶಃ ಆತನ ಚೈತನ್ಯವನ್ನು ನಂತರ ಬಂದ ಎಲ್ಲಾ ನೀಗ್ರೋಗಳು ಕಾಪಾಡಿಕೊಂಡು ಬರಲು ಯತ್ನಿಸುತ್ತಿದ್ದಾರೆ. ಪ್ರತಿಯೊಬ್ಬ ನೀಗ್ರೋಗೂ ಜೆಸ್ಸಿ ಆರಾಧ್ಯ ದೈವ.

ಓವನ್ಸನ ಅಪ್ರತಿಮ ಪ್ರತಿಭೆಯನ್ನು ಕಂಡು ಹಿಟ್ಲರ್ ದಂಗಾದದಷ್ಟೇ ಅಲ್ಲ ತುಂಬಾ ಅನಾಗರೀಕನಂತೆಯೂ ನಡೆದುಕೊಂಡ. ಮುಖ್ಯ ಅತಿಥಿಯಾಗಿದ್ದ ಆತ ಪದಕ ನೀಡಬೇಕಾಗಿತ್ತು. ಆದರೆ ಆತ ನಿರಾಸೆ, ಕೋಪದಿಂದ ಹೊರಟು ಹೋಗಿದ್ದ. ಆ ಮೂಲಕ ಜೆಸ್ಸಿ ಓವನ್ಸ್‌ನ ಕೈ ಹಿಟ್ಲರ್‌ನ ಕೈ ಕುಲುಕುವಿಕೆಯಿಂದ ಮಲಿನವಾಗುವುದು ತಪ್ಪಿತು.

ಇತ್ತೀಚಿನ ಲಾಸ್ ಏಂಜಲ್ಸ್‌ನ ಒಲಂಪಿಕ್‌ನಲ್ಲಿ ಜೆಸ್ಸಿ ಓವನ್ಸ್‌ನ ದಾಖಲೆ ಮುರಿದ ಕಾರ್ಲ್ ಲೂಯಿಸ್‌ನನ್ನು ಓವನ್ಸ್‌ನ ಜೊತೆ ಹೋಲಿಸಿ ಅನೇಕರು ಬರೆದಿದ್ದಾರೆ. ಒಂದಂತೂ ನಿಜ; ಲೂಯಿಸ್ ಓವನ್ಸ್‌ನ ಎಲ್ಲಾ ದಾಖಲೆಗಳನ್ನೂ ಉತ್ತಮಪಡಿಸಿದ್ದಾನೆ. ಆದರೆ ಓವನ್ಸ್ ತಾನು ಆಡಿದ ಹಿನ್ನೆಲೆಯಲ್ಲಿ ಲೂಯಿಸ್‌ಗಿಂತ ಹೆಚ್ಚು ಜವಾ

ವರ್ಣದ್ವೇಷ : ಯಾವುದು ನಿಜ ?

1912ರ ಸ್ಟಾಕ್ ಹೋಂ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಅಮೇರಿಕನ್ ಟೀಮನ್ನು ಆಯ್ಕೆ ಮಾಡಬೇಕಿತ್ತು. ಹೌವರ್ಡ್ ಡ್ರ್ಯೂ ಎಂಬ ನೀಗ್ರೋ ನೂರು ಮೀಟರ್ ವೇಗದ ಓಟದಲ್ಲಿ ತಾನು ಆಯ್ಕೆಯಾಗಬೇಕೆಂದು ಸತತ ಅಭ್ಯಾಸ ನಡೆಸಿದ್ದ. ಆತನ ದಾಖಲೆಗಳೆಲ್ಲಾ ರಾಷ್ಟ್ರೀಯ ದಾಖಲೆಗಳನ್ನು ಅಳಿಸಿ ಹಾಕಿದ್ದವು. ಎಲ್ಲರೂ ಆತನ ಆಯ್ಕೆ ನಿಶ್ಚಿತವೆಂದು ನಂಬಿದ್ದರು. ಆದರೆ ಆಯ್ಕೆಯ ದಿನ ಎಲ್ಲರಿಗೂ ಆಶ್ಚರ್ಯ ಕಾದಿತ್ತು. ಓಟ ಪ್ರಾರಂಭವಾದರೂ ಹೌವಾರ್ಡ್ ಅಲ್ಲೆಲ್ಲೂ ಕಾಣಲೇ ಇಲ್ಲ. ಅಷ್ಟೇ ಅಲ್ಲ ಆಯ್ಕೆ ಸಮಿತಿಯವರೂ ಸಹ ಅವನೆಲ್ಲಿದ್ದಾನೆ, ಯಾಕೆ ಬರಲಿಲ್ಲ ಎನ್ನುವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳಲಿಲ್ಲ. ಆದರೆ ಆಯ್ಕೆ ಎಲ್ಲಾ ಮುಗಿದ ನಂತರ ಹೊರಬಿದ್ದ ಸಂಗತಿ ಎಲ್ಲರಿಗೂ ದಿಗ್ಭ್ರಮೆ ತರುವಂಥದಾಗಿತ್ತು. ಅಂತಿಮ ಆಯ್ಕೆ ದಿನ ಅವನ ಜೊತೆಯ ಆಟಗಾರರೇ ಅವನನ್ನು ಡ್ರೆಸಿಂಗ್ ರೂಮಿನಲ್ಲಿ ಕೂಡಿಹಾಕಿ ಬೀಗ ಹಾಕಿದ್ದರು. ವರ್ಣೀಯನೊಬ್ಬ ಒಲಂಪಿಕ್ಸ್‌ನಲ್ಲಿ ವೇಗದ ಓಟಗಾರನಾಗಿ ಚಿನ್ನದ ಪದಕ ಗಳಿಸುವುದನ್ನು ಸಹಿಸುವುದಕ್ಕೆ ಅವರು ಸಿದ್ಧರಿರಲಿಲ್ಲವಂತೆ.

ಹಲವಾರು ವರ್ಷಗಳ ನಂತರ ಹೌವಾರ್ಡ್ ಹೇಳಿದ ಕಥೆಯೇ ಬೇರೆ ಇತ್ತು. ವರ್ಣದ್ವೇಷಕ್ಕೂ ಇದಕ್ಕೂ ಏನೂ ಸಂಬಂಧ ಇಲ್ಲ. ಹಿಂದಿನ ದಿನದ 100 ಮೀಟರ್ ಓಟದಲ್ಲಿ ಕಾಲಿನ ಸ್ನಾಯು ಎಳೆತದ ನೋವಿನಿಂದಾಗಿ ಆಯ್ಕೆ ದಿನ ಭಾಗವಹಿಸಲಾಗಲಿಲ್ಲ ಎಂದು. ಆ ಒಲಂಪಿಕ್ಸ್‌ನಲ್ಲಿ ಅಮೇರಿಕದ ಬಿಳಿಯನೊಬ್ಬ ಚಿನ್ನದ ಪದಕ ಪಡೆದನೆಂಬುದು ಬೇರೆ ಮಾತು. ಇದಾದ ಎರಡು ಒಲಂಪಿಕ್ಸ್ ನಂತರ ಅಧಿಕೃತವಾಗಿ ಅಮೇರಿಕನ್ ಟೀಮಿನಲ್ಲಿ ನೀಗ್ರೋ ಅಥ್ಲೆಟ್ ಒಬ್ಬ ಭಾಗವಹಿಸಿದ.

"ಕಪ್ಪು ಹರಳು" ವಿಲ್ಮ ರುಡಾಲ್ಫ್

1960ರ ರೋಮನ್ ಒಲಂಪಿಕ್ಸ್‌ನಲ್ಲಿ ಮೂರು ಚಿನ್ನದ ಪದಕ ಪಡೆದವಳು. ಇಪ್ಪತ್ತು ವರ್ಷದ ಕಾಲೇಜ್ ಹುಡುಗಿಯಾದ ಈಕೆ 100 ಮೀಟರ್, 200 ಮೀಟರ್ ಮತ್ತು 400 ಮೀಟರ್ ರಿಲೇ ಓಟಗಳಲ್ಲಿ ಚಿನ್ನದ ಪದಕಗಳಿಸಿದವಳು. ಇವಳನ್ನು ಆಗಿನ ಒಲಂಪಿಕ್ಸ್‌ನಲ್ಲಿ ಭಾಗವಹಿಸಿದವರು "ಕಪ್ಪು ಹರಳು" ಎಂದು ಅಭಿಮಾನದಿಂದ ಕರೆದಿದ್ದರು. 1960ರ ಒಲಂಪಿಕ್ಸ್‌ನಲ್ಲಿ ಮೂರು ಚಿನ್ನದ ಪದಕಗಳಿಸಿದ ಏಕೈಕ ಮಹಿಳೆ. ಅಲ್ಲದೇ ಒಲಂಪಿಕ್ಸ್‌ನಲ್ಲಿ ಮೂರು ಚಿನ್ನದ ಪದಕಗಳಿಸಿದ ಅಮೇರಿಕಾದ ಪ್ರಥಮ ಮಹಿಳೆ.

ಮೀಸಲಾತಿ ರದ್ದು: ಸ್ವಾಗತಿಸುತ್ತೇವೆ ಎಚ್ಚರಾ!

ದೇಶದ ಮೂಲೆ ಮೂಲೆಗಳಲ್ಲಿ, ...ದ್ದು ನಿಂತ ಮೇಲ್ಜಾತಿಯ ಜನಗಳಲ್ಲಿ ಮೀಸ ...ತಿಯ ಬಗ್ಗೆ ಬಿಸಿ ಬಿಸಿ ಚರ್ಚೆ ನಡೆಯತೊಡ ...ದ್ದು, ಮತ್ಸರದ ಹೊಗೆಯಾಗ ತೊಡಗಿದೆ. ಈಗಾ ...ೆ ಹಲವು ಕಡೆ ಅದರ ಉದ್ದೇಶಗಳನ್ನು ತೋಡಿ ...ಂಡಾಗಿದೆ.

ಮೀಸಲಾತಿ ಸರ್ಟಿಫಿಕೇಟ್ ಇದ್ದರೆ ಸಾಕು ...ಸ ಎಲ್ಲಿಯಾದರು ಗಿಟ್ಟಿಸಬಹುದೆನ್ನುವ ಮಟ್ಟಕ್ಕೆ ...ನ್ನು ಸುತ್ತಲಿನ ವಾತಾವರಣ ಹುಯಿಲೆಬ್ಬಿಸಿದೆ. ...ದರ ಜೊತೆಗೆ ಕೆಲವು ಗೆಜೆಟೆಡ್ ಉದ್ಯೋಗಗಳಿಗೆ ...ಕ್ತ ವಿದ್ಯಾರ್ಥಿಗಳು ಸಿಗುತ್ತಿಲ್ಲವೆನ್ನುವ ಮಾತು ...ಒು ಕೇಳಿ ಬರುತ್ತಿವೆ.

ಯಾವೊಂದು ಶಾಲೆ ಕಾಲೇಜಿನಲ್ಲಿಯೂ ...ಸ್ಪೃಶ್ಯ ವಿದ್ಯಾರ್ಥಿಗಳು ಮೀಸಲಾತಿ ಸರ್ಟಿಫಿ ...ಟ್ ತೋರಿಸಿ ಪಾಸಾಗುತ್ತಿಲ್ಲ. ಹಾಗೇ ಸಮಾ ...ಕ, ಆರ್ಥಿಕ ಎರಡರಲ್ಲೂ ಹಿಂದೆ ಬಿದ್ದಿರುವ ...ಾವು (ದಲಿತ ವಿದ್ಯಾರ್ಥಿ) ಹಣಕೊಟ್ಟಾಗಲಿ, ...ಮ್ಮ ಹೆಣ್ಣುಗಳನ್ನು ಮದುವೆ ಮಾಡಿಕೊಳ್ಳು ...ೇವೆಂದಾಗಲಿ ಹೇಳಿ ಪಾಸಾಗುತ್ತಿಲ್ಲ; ಜೊತೆಗೆ ...ಾವು ಬೇರೆಯವರಿಗಿಂತ ಉತ್ತಮ ವಿದ್ಯಾರ್ಥಿಗಳು ...ನ್ನುವುದರಲ್ಲಿ ಎರಡು ಮಾತಿಲ್ಲ. ಇದೆಲ್ಲಾ ...ಡರು ತೋಡರುಗಳನ್ನು ದಾಟಿ ಒಬ್ಬರು ...ಲ್ಲೊ ಇಲ್ಲೊ ಕೆಲಸ ಗಿಟ್ಟಿಸಿದರೆ ಅವರಿಗೆ ಕೊಡುವ ...ರುಕುಳವಂತು ಹೇಳತೀರದು.

ಸರಿ ಇವೆಲ್ಲ ಹಾಳಾಗಲಿ. ನಮ್ಮ ಸರ್ಕಾರ ...ಮೇಲ್ಜಾತಿ) ಮೀಸಲಾತಿಯನ್ನು ಎಲ್ಲಿಯ ತನಕ ...ಾಲಿಸಿದೆ, ಎಂದರೆ ನ್ಯಾಯಲಾಯಗಳಾಗಲಿ ...ರಾವುದೆ ವಿಭಾಗವಾಗಲಿ ಶೇ.18 ಮೀಸಲಾತಿ ...ಿಂಬಿಲ್ಲವೆನ್ನುವುದನ್ನು ಮತ್ತೊಮ್ಮೆ ಎಲ್ಲರು ...ೇಳುವ ಹಾಗೆ ನಾನು ಹೇಳುತ್ತಿದ್ದೇನೆ. ಇಷ್ಟಕ್ಕೂ ದೇಶದಲ್ಲಿ ಓದಿರುವ ಅಸ್ಪೃಶ್ಯರ ಸಂಖ್ಯೆ ಶೇ. ಎರಡ ರಿಂದ ಮೂರು. ಇದರ ಜೊತೆಗೆ ಅಸ್ಪೃಶ್ಯರಿಗೆ ಹುಟ್ಟಿದ್ದೇವೆಂದು ಸರ್ಟಿಫಿಕೇಟ್ ಪಡೆದ ಸ್ಪೃಶ್ಯ ರು, ಅಸ್ಪೃಶ್ಯರ ಜಾಗಗಳಲ್ಲಿ ಯಾವ ಆತಂಕವು ಇಲ್ಲದೆ ಬೀಳು ಬಿಟ್ಟಿದ್ದಾರೆ. ಇದಕ್ಕೆ ಇತ್ತೀಚಿಗೆ ನಡೆಸಿದ ಸಮೀಕ್ಷೆಗಳೆ ಸಾಕ್ಷಿ.

ಮೀಸಲಾತಿಯ ಹಣೆಪಟ್ಟಿ ಕಟ್ಟಿಕೊಂಡು ನಿಮ್ಮ ಕೆಳಗೆ ಜೀವನ ಮಾಡಬೇಕೆಂಬ ಆಸೆ ನಿಜವಾಗಿಯು ನಮ್ಮಲ್ಲಿ ಎಳ್ಳಷ್ಟು ಇಲ್ಲ. ಆದರೆ ಇದಕ್ಕೆಲ್ಲಾ ಕಾರಣ ಈ ದೇಶದ ಬ್ರಾಹ್ಮಣರು.... ಹಣವಂತರು... ಜಾತಿ ಮತ ಹುಟ್ಟಿಸಿ ಆರ್ಥಿಕ ಸಾಮಾಜಿಕ ಪ್ರಜ್ಞೆಗಳನ್ನ ಕಸಿದುಕೊಂಡು, ಕಪ್ಪು ಕೂಪದಲ್ಲಿಟ್ಟು ನಮ್ಮನ್ನು ನೋಡಿನಗತೊಡಗಿದ್ದು, ಮನುಷ್ಯ ಮನುಷ್ಯರ ಮಧ್ಯೆ ಕಂದರಗಳ ಹುಟ್ಟಿ ಸಿದ್ದು.

ಇದೆಲ್ಲವನ್ನು ಪೂರ್ತಿ ತೊಡೆದು, ನಾವೆಲ್ಲ ಮನುಷ್ಯರು ...ಯಾವ ಅಂತರವು ಇಲ್ಲಾ ಎನ್ನುವು ದನ್ನು ಯಾವತ್ತು ತೋರಿಸುತ್ತೀರೊ ಆ ಹೊತ್ತು ನಾವು ಮೀಸಲಾತಿಯ ಬಗ್ಗೆ ಚಿಂತಿಸುವುದಿಲ್ಲ. ಜಾತಿ, ಮತ, ಹಸಿವು ಅಸ್ಪೃಶ್ಯತೆ .... ಒಂದು ಕಡೆ,ಹಣ, ಅಹಂಕಾರ, ದರ್ಪ ಇನ್ನೊಂದು ಕಡೆ.ಇದರ ಮಧ್ಯೆ ಸಮಾನವೆನ್ನುವ ಪದದ ಅರ್ಥ ವಾದರೂ ಏನು ?

ಸಮಾಜದ ಬಹಿಷ್ಕಾರಗಳೆಲ್ಲವನ್ನು ತಡೆದು ಕೊಂಡು ದಿನವಿಡೀ ದುಡಿದರೂ ಒಪ್ಪೊತ್ತಿಗೆ ಗಂಜಿ ಇಲ್ಲದೆ ನರಳುತ್ತಿರುವ ಜನಕ್ಕೆ ಅಲ್ಪಸ್ವಲ್ಪ ಆಧಾರ ವಾಗಿರುವ ಮೀಸಲಾತಿಯನ್ನು ಕೀಳಬೇಕೆಂದಿರುವ ನೀವು ನಮ್ಮ ಜೊತೆ ಬೀದಿಗೆ ಬನ್ನಿ, ನಾವು ಸಹಿ ಸುವ ... ಮಾಡುತ್ತಿರುವ ... ಅನುಭವಿಸುವ........ ಯಾತನೆ ಎಲ್ಲವನ್ನು ಸಮಾನವಾಗಿ ಹಂಚಿಕೊಳ್ಳಿ. ಆಗ ಸಮಾನವೆನ್ನುವ ಪದಕ್ಕೆ ಅರ್ಥವಾದರೂ ಹೊಳೆಯುತ್ತದೆ.

ಕೆಲವು ಅಸ್ಪೃಶ್ಯರು ಅಸ್ಪೃಶ್ಯರೆಂದು ಹೇಳಿ ಕೊಳ್ಳಲು ಹಿಂಜರಿಯುತ್ತಾರೆ ಎನ್ನುವ ದೂರು ಕೇಳಿ ಬರುತ್ತಿದೆ. ಇದಕ್ಕೆ ಕಾರಣ ಈ ಸಮಾಜದ ವಾತಾವರಣವೆ ಹೊರತು ಅಸ್ಪೃಶ್ಯರಲ್ಲ. ನೀರು ಕುಡಿಯಬೇಕಾದರೆ... ಬೀದಿಯಲ್ಲಿ ನಡೆಯಬೇಕಾದರೆ ....ಮನುಷ್ಯರ ಜೊತೆ ಮಾತನಾಡಬೇಕಾದರೆ.... ಜಾತಿ ಅಡ್ಡ ನಿಲ್ಲುತ್ತದೆ. ಅಸ್ಪೃಶ್ಯರು ಜಾತಿ ಹೇಳಿ ಕೊಳ್ಳಲು ಹಿಂಜರಿಯುವುದು ಜಾತಿ ಕೀಳೆಂದಲ್ಲ.... ಸುತ್ತಲಿರುವ ಸಮಾಜದೊಡನೆ ಸ್ವಲ್ಪವಾದರೂ ಸಮಾದಾನದ ಉಸಿರಾಡಲು. ಸ್ವತಂತ್ರವಾಗಿ ಓಡಾ ಡಲು. ಇತ್ತೀಚಿನ ಪೀಳಿಗೆಯ ಕೆಲವು ಅಸ್ಪೃಶ್ಯರು ಎದೆ ಸೆಟೆದು ಅಸ್ಪೃಶ್ಯರೆಂದು ಹೆಮ್ಮೆಯಿಂದ ಹೇಳಿ ಕೊಳ್ಳುತ್ತಾರೆ. ಇದು ಅಸ್ಪೃಶ್ಯರಲ್ಲಿ ಬೆಳೆಯುತ್ತಿ ರುವ ಆತ್ಮ ಗೌರವದ ಸಂಕೇತ.

"ಇದೆಲ್ಲ ಹಾಗೇ ಇರಲಿ ಮೀಸಲಾತಿ ತೊಲ ಗಲಿ" ಎನ್ನುವ ಮಾತಾದರೂ ನಿಮ್ಮ ಬಾಯಿಂದ ಹೇಗೆ ಹೊರಬರುತ್ತೆ. ನೀವು ಬಾಯಲ್ಲಿ ಹೊದರು ವಷ್ಟು ಸುಲಭವಲ್ಲ. ಹಾಗೇನಾದರೂ ಕಡಾ ಖಂಡಿತವಾಗಿ ಮೀಸಲಾತಿ ಹೋಗಲೆ ಬೇಕೆಂದು ನೀವು ಸಿದ್ಧರಾದರೆ, ಅದನ್ನು ಸ್ವಾಗತಿಸುತ್ತೇವೆ. ಆದರೆ ಅದರ ಜೊತೆ ನಾವು ನಿರೀಕ್ಷಿಸುವ ರೂಪ ವನ್ನು ಪಡೆಯುತ್ತೆವೆ ಎನ್ನುವುದು ಜ್ಞಾಪಕ ವಿರಲಿ....?

ಎಂ. ವೆಂಕಟಸ್ವಾಮಿ
ಕೆ. ಜಿ. ಎಫ್.

ಪದಕವನ್ನು ನದಿಗೆ ಎಸೆದ ಮುಹಮ್ಮದ್ ಆಲಿ

1960ರ ರೋಮ್ ಒಲಿಂಪಿಕ್ಸ್ ಸೃಷ್ಟಿ ...ದ ಮತ್ತೊಬ್ಬ ಅದ್ಭುತ ವ್ಯಕ್ತಿಯೆಂದರೆ ಕ್ಯಾಸಿ ...ಯಸ್ ಕ್ಲೇ. ಆಗ ತಾನೇ ಹೈಸ್ಕೂಲ್ ಪಾಸ್ ...ಮಾಡಿದ ಹದಿನೆಂಟು ವರ್ಷ ವಯಸ್ಸಿನ ಅಮೆರಿ ...ನ್ ಹುಡುಗನೊಬ್ಬ ಲೈಟ್—ಹೆವಿವೈಟ್ ...ಬಾಕ್ಸಿಂಗ್‌ನಲ್ಲಿ ಚಿನ್ನದ ಪದಕಗಳಿಸಿದ್ದು ಅನೇಕರ ...ಹುಬ್ಬೇರಿಸಿತು. ಅವನು ಜನಾಕರ್ಷಣೆಯ ಪ್ರಮುಖ ಕೇಂದ್ರವಾಗಿದ್ದ. ತನ್ನ ನಿರರ್ಗಳ ಮಾತು,ಹಾಸ್ಯಗಳಿಂದಾಗಿ ಜನಮುಗಿಬೀಳುವಂತೆ ಮಾಡುತ್ತಿದ್ದ. ಈತ ಮುಂದೆ ದಂತ ಕಥೆಯಾ ಗುತ್ತಾನೆಂದು ಯಾರಿಗೂ ಅರಿವಿರಲಿಲ್ಲ. ಇದೇ ಕ್ಲೇ ಮುಂದೆ ತನ್ನ ಹೆಸರನ್ನು ಮಹಮದ್ ಆಲಿ ಎಂದು ಬದಲಾಯಿಸಿಕೊಂಡದ್ದು, ವಿಯಟ್ನಾಂ ಮೇಲೆ ಅಮೆರಿಕಾದ ಆಕ್ರಮಣವನ್ನು ಪ್ರತಿಭಟಿ ಸಿದ್ದು, ಅಮೆರಿಕನ್ನರ ವರ್ಣದ್ವೇಷವನ್ನು ಪ್ರತಿಭ ಟಿಸಿ ಚಿನ್ನದ ಪದಕವನ್ನು ನದಿಗೆಸೆದದ್ದು ಹಾಗೂ ಶತಮಾನದ ಶ್ರೇಷ್ಠ ಹೆವಿ ವೈಟ್ ಛಾಂಪಿಯನ್ ಆದದ್ದು.

ಹ್ಯಾರಿಸನ್ ಡಿಲ್ಲಾರ್ಡ್

ಅಮೆರಿಕಾದಲ್ಲಿ ನಡೆದ ಸುಮಾರು 82 ಹರ್ಡಲ್ಸ್ ಪಂದ್ಯಗಳಲ್ಲಿ ಒಂದರಲ್ಲೂ ಸೋಲದೆ 1948ರ ಲಂಡನ್ ಒಲಂಪಿಕ್ಸ್‌ಗೆ ಖಚಿತಆಯ್ಕೆ ಎಂದು ಕೊಂಡಿದ್ದ ಡಿಲ್ಲಾರ್ಡ್ ಆಯ್ಕೆಯ ಪಂದ್ಯ ದಲ್ಲಿ ಹರ್ಡಲ್ ನೆಗೆಯುವಾಗ ಎಡವಿ ಬಿದ್ದದ್ದು ಬಹಳಷ್ಟು ಜನಕ್ಕೆ ಆಶ್ಚರ್ಯವಾಗಿತ್ತು. ಆದರೂ ಅವನ ಹಿಂದಿನ ದಾಖಲೆಗಳ ಆಧಾರದ ಮೇಲೆ ಆಯ್ಕೆ ಮಾಡಲಾಯಿತು. ಮುಂದಿನ ಕಥೆ ಇತಿ ಹಾಸದ ದಾಖಲೆಯಾಗಿ ಸೇರಿ ಹೋಗಿದೆ. ನೂರು ಮೀಟರ್ ಹಾಗೂ 400 ಮೀಟರ್ ರಿಲೇ ಓಟ ಗಳಲ್ಲಿ ಎರಡು ಸ್ವರ್ಣಗಳಿಸಿದ.

ಚರ್ಚೆ

ವಾಮ ಪಂಥೀಯರು ನಕ್ಸಲೀಯರ ಪ್ರಥಮ ಶತ್ರುಗಳಲ್ಲ

ಮಾನ್ಯರೆ,

ಪಂಚಮ ಆಗಸ್ಟ್ ಸಂಚಿಕೆಯಲ್ಲಿ ಶ್ರೀ ಕೆ. ಶ್ರೀಧರ ಭಟ್‌ರವರು ಬರೆದ "ನಕಲ್ಸ್ ವಾದಿಗಳು ಅಮೇರಿಕಾ ಏಜೆಂಟರೇ?", ಎಂಬ ಚರ್ಚಾ ವಿಷಯ ವನ್ನು ಓದಿದಾಗ....ಶ್ರೀಯುತರಕಳಕಳಿಯ ಗೊಂದ ಲದ ಪ್ರಶ್ನೆಗಳಿಗೆ ಉತ್ತರಿಸುವುದಕ್ಕಿಂತಲೂ ಸಧ್ಯದ ವಾಸ್ತವಿಕ ಪರಿಸ್ಥಿತಿಯನ್ನು ವಿವರಿಸುವುದು ಸೂಕ್ತ ವೆನಿಸುತ್ತದೆ

ಪ್ರಿಯರೇ ನೈಜ ವಾಮಪಂಥೀಯರನ್ನು ನಕ್ಸಲೀಯರು ಎಂದೂ ಪ್ರಥಮ ಶತ್ರುಗಳೆಂದಾಗಲೀ... ಶತ್ರುವೆಂದಾಗಲೀ ಭಾವಿಸುವುದಿಲ್ಲ. ಅವರ ನಿಲುವುಗಳು ಸ್ವಲ್ಪಮಟ್ಟಿಗೆ ಭಿನ್ನಾಭಿಪ್ರಾಯ ಗಳಿಂದ ಕೂಡಿದ್ದರೂ, ಅವರ ಹೋರಾಟಗಳು ಒಂದು ನವ ಸಮಾಜದ ನಿರ್ಮಾಣಕ್ಕಾಗಿ ಎಂಬುದನ್ನು ನಕ್ಸಲೀಯ ಒಪ್ಪುತ್ತಾನೆ. ಅದು ಯಾವುದೇ ಪುರೋಗಾಮಿ ಹೋರಾಟಗಳಿರ ಬಹುದು, ಉದಾ: ರೈತರು; ದಲಿತರು; ಕಾರ್ಮಿಕರು; ಭಾಷಾ ಹೋರಾಟ; ಭೂಮಿ ಹೋರಾಟ ಯಾವುದಿದ್ದರೂ ಆ ಹೋರಾಟಪ್ರಗತಿ ಪರ ಹೋರಾಟವಾಗಿದ್ದಲ್ಲಿ ಖಂಡಿತವಾಗಿಯೂ ನಕ್ಸಲೀಯರು ಬೆಂಬಲಿಸುತ್ತಾರೆ.

ಬಂಡವಾಳಶಾಹೀ ದೇಶಗಳು ಅಣು ವಿಜ್ಞಾನದಲ್ಲಿ ಪ್ರಗತಿ ಸಾಧಿಸಿ ಸಮಾಜವಾದೀ ದೇಶಗಳನ್ನು ನಿರ್ನಾಮ ಮಾಡಬಹುದೆಂಬ ಭೀತಿ ಸಹಜವಾದುದೇ ಆದರೂ....ಬಂಡವಾಳಶಾಹೀ ದೇಶಗಳ ಧೋರಣೆ ಗಳಿಗಿಂತ ಸಮಾಜವಾದೀ ದೇಶಗಳ ಧೋರಣೆಗಳೂ ಹೆಚ್ಚೇನೂ ಭಿನ್ನವಾಗಿಲ್ಲವೆಂದುಪ್ರಪಂಚದ ಸಮಾಜ ವಾದೀ ಮತ್ತು ಬಂಡವಾಳಶಾಹೀ ದೇಶಗಳನ್ನು ಗಣನೆಗೆ ತೆಗೆದು ಕೊಂಡಾಗ ಅರಿವಾಗುತ್ತದೆ.

ಯಾವುದನ್ನು ನಾವು ಸಮಾತವಾದ ಸಮಾಜವಾದವೆಂದು ಹೇಳುತ್ತೇವೆಯೋ ಅವೆಲ್ಲ ಸಮತಾ ವಾದಿ ದೇಶಗಳು ಹುಟ್ಟಿಕೊಂಡ ಮೊಳಕೆಯಲ್ಲೇ ಸರ್ವಾಧಿಕಾರದ ಕೈಯಲ್ಲಿ ಸತ್ತು ಹೋಗಿವೆ. ಏಂಗಲ್ಸ್, ಮಾರ್ಕ್ಸ್, ಲೆನಿನ್, ಮಾವೋರ ಕನಸು ಕನಸುಗಳಾಗೇ ಉಳಿದಿವೆ ಹೊರತು ನೈಜ ಕಮ್ಯುನಿಸಂ ಜೀವಂತವಾಗಿ ಉಳಿಯಲಿಲ್ಲ.

ಕಮ್ಯುನಿಸಂನ ಹೆಸರಲ್ಲಿ ಸರ್ವಾಧಿಕಾರ; ಶ್ರಮಜೀವಿಗಳ ಹೋರಾಟಕ್ಕೆ ಬೆಂಬಲದ ಹೆಸರಲ್ಲಿ ಕಮ್ಯುನಿಸಂನ ರಫ್ತು; ಸ್ವಾತಂತ್ರ್ಯದ ಹೆಸರಲ್ಲಿ ರಾಷ್ಟ್ರೀಯತೆಯ ದಮನ; ವಿಶ್ವಾಸ, ಭ್ರಾತೃತ್ವದ ಬದಲಾಗಿ ಆಕ್ರಮಣ ವೈರತ್ವ; ಜೈಲಲ್ಲಿ ಭೂರೀ ಬೋಜನ ಎಂಬಂತೆ ವ್ಯಕ್ತಿ ಸ್ವಾತಂತ್ರ್ಯ; ಪತ್ರಿಕಾ ಸ್ವಾತಂತ್ರ್ಯ; ಸಂಘಟನಾ ಸ್ವಾತಂತ್ರ್ಯಗಳನ್ನು ಕಸಿದುಕೊಂಡು ವಿಕೃತವಾಗಿ ಕಾರ್ಮಿಕರ ಸರ್ವಾಧಿ ಕಾರವೆಂದು ಸಮಾಜವಾದ—ಸಮತವಾದವನ್ನು ಜಾರಿಗೊಳಿಸಲಾಗಿದೆ ಎಂದರೆ ಸಿ. ಐ. ಎ. ಪರ ವಾದವೆಂದು ಯಾರೂ ಸತ್ಯವನ್ನು ಕೊಲ್ಲಲಾರರು ಅಲ್ಲವೇ ?

ನವ ವಸಾಹತುಶಾಹೀ ಧೋರಣೆಯಿಂದಾಗಿ ಪ್ರಪಂಚದ ಎಲ್ಲಾ (ಮರ್ದಿತ ದೇಶಗಳನ್ನು ಬಿಟ್ಟರೆ) ಬಂಡವಾಳಶಾಹೀ ಹಾಗೂ ಸಮಾಜವಾದಿ ದೇಶಗಳು ತಮ್ಮ ಹಿಡಿತವನ್ನು ವಿಶ್ವವ್ಯಾಪಿಯಾಗಿ ಸಲು ನಾಮುಂದು ತಾಮುಂದು ಎಂದು ತೀವ್ರತರ ಪೈಪೋಟಿ ನಡೆಸುವುದನ್ನು ನಾವು ಕಾಣುತ್ತೇವೆ. ಕೊಳ್ಳೆ ಹೊಡೆಯುವ ಸಲುವಾಗಿ ಅಧೀನ ರಾಷ್ಟ್ರಗಳನ್ನಾಗಿಸಲು ಇವುಗಳ ಪೈಪೋಟಿ ತಾರಕಕ್ಕೇರಿದಾಗ ಬಡರಾಷ್ಟ್ರಗಳನ್ನು ಬಲಿಕೊಟ್ಟು ಶಶ್ತ್ರಾಸ್ತ್ರಗಳನ್ನು ಪೂರೈಸುವುದರ ಮುಖಾಂತರ ತಮ್ಮ ಲಾಭಕ್ಕೆ ಅಡ್ಡಿ ಬರದಂತೆ, ತಾವು ಉತ್ಪಾದಿಸಿದ ಶಶ್ತ್ರಾಸ್ತ್ರ ಗಳನ್ನು ಮಾರಾಟ ಮಾಡಿಕೊಳ್ಳುತ್ತವೆ ಮತ್ತು ಯಾರ ಅಸ್ತ್ರಕ್ಕೆ ಹೆಚ್ಚು ಜನರನ್ನು ಸುಲಭವಾಗಿ ಕೊಲ್ಲಲು ಸಾಧ್ಯವಾಗುತ್ತದೆ? ನಮ್ಮಲ್ಲಿ ಯಾವನು ಬ್ರಹ್ಮರಾಕ್ಷಸ ಎಂಬುವನ್ನು ಸ್ಪಷ್ಟಪಡಿಸಿಕೊಳ್ಳುತ್ತವೆ. ಶ್ರೀಯುತರು ಮರೆತುಬಿಟ್ಟ ವಿಷಯ ವೇನೆಂದರೆ ಸಮಾಜವಾದಿ ಹೆಸರಿನಲ್ಲಿ ಬೆಳೆಯುತ್ತಿ ರುವ ನವ ಬಂಡವಾಳಶಾಹೀ ದೇಶಗಳು ಕೂಡ ಶಶ್ತ್ರಾಸ್ತ್ರಗಳ ದೊಡ್ಡಗೋಡೌನುಗಳನ್ನು ಹೊಂದಿವೆ ಎಂಬುದು.

C. I. A. ಯಿಂದ ಸಹಾಯ ಬರುತ್ತಿದೆಯೇ ಎಂದು ಸಂಶಯಿತರಾಗುವ ಶ್ರೀಯುತರು ಉದ್ದೇಶಪೂರ್ವಕ ಅಪವಾದ ಮಾಡದಿದ್ದರೂ.... ನಕ್ಸಲೀಯರು ಯಾರ ಚೇಲಗಳೂ ...ಗುಲಾಮರೂ ಅಲ್ಲವೆಂಬುದನ್ನು ಸ್ಪಷ್ಟ ಪಡಿಸುತ್ತೇವೆ.ನಮ್ಮ ಶಕ್ತಿ ಯಾವುದೇ ಬಂಡವಾಳಶಾಹೀ ವಿದೇಶೀ ದುಷ್ಟ ಕೂಟಗಳಲ್ಲ. ನಮ್ಮ ಶಕ್ತಿ ಶೋಷಿತ; ಮರ್ದಿತ ಶ್ರಮಿಕ ವರ್ಗ; ನೈಜ ಸಿದ್ಧಾಂತ ಆತ್ಮ ವಿಶ್ವಾಸ.

ಇನ್ನು ಮಧ್ಯಮ ವರ್ಗದ ಬಗ್ಗೆ ಹೇಳುವುದಿದ್ದರೇ....ಇತರ ದೇಶಗಳಲ್ಲಿನ ಸಮಾಜ ಬದಲಾವಣೆಯಂತೆ (ರೂಪಾಂತರ)ಇಂಡ್ಯಾದಲ್ಲಿ ಫ್ಯೂಡಲ್ ವ್ಯವಸ್ಥೆಯಿಂದ ಬಂಡವಾಳಶಾಹೀ ವ್ಯವಸ್ಥೆಗೆ ಕಾಲಿಟ್ಟಿರುವ ನಮ್ಮದೇಶದ ಸಮಾಜವ್ಯವಸ್ಥೆಯಲ್ಲಿ ಶೋಷಣೆ–ಸುಲಿಗೆಯೇ ಸಂಪಾದನೆಯ ತಾಯಿ ಬೇರಾಗಿರುವಾಗ ಕಮ್ಯುನಿಸಂನತ್ತ ಮಧ್ಯಮವರ್ಗ ಆಕರ್ಷಿತವಾಗುತ್ತದೇನೋ ನಿಜ. ಮತ್ತೆ ತನ್ನ ಗೊಂದಲಗಳಿಂದಾಗಿ ಅರಾಜಕ ಪಥದಲ್ಲಿ ಮುಂದು ವರಿದು; ಸಂಘಟನೆ ಹೋರಾಟ ಎಲ್ಲವೂ ಸೀಮಿತ ಆರ್ಥಿಕ ಹೋರಾಟಗಳಲ್ಲೇ ನಿಂತು ಬಿಡುತ್ತವೆ ಮತ್ತು ರಾಜಿ ಮಾಡಿಕೊಂಡು ತನ್ನ ನಿರ್ಧರಿತ ಗುರಿಯನ್ನು ಬಲಿ ಕೊಡುತ್ತವೆ.

ಶ್ರೀಯುತರ ವಾದದಂತೆ ಇವುಗಳನ್ನು ಕೋಮು ಸಂಸ್ಥೆಗಳಿರಬಹುದು, ಪರಿಷ್ಕರಣಾ ವಾದಿಗಳಿರಬಹುದು ಅಥವಾ ಇನ್ಯಾರೇ ಪೋಷಿಸು ತ್ತಿರಬಹುದು. ಇವರಿಗೆ ಬದಲಾವಣೆಗಿಂತ ಸುಧಾ ರಣೆ ಸಾಕಾಗಿರುತ್ತದೆ. ಕಾರ್ಮಿಕರು ಶ್ರಮಜೀವಿ ಗಳನ್ನು ಅವರವರಿಗೇ ಎತ್ತಿಕಟ್ಟುವ ನಾಯಕರ್ರ ಗಳಿಂದ ಬೆಳೆಸಲ್ಪಡುವ ಇಂಥ ಸಂಘಟನೆ ಗಳು ಇಲ್ಲಿ ಸಾಕಷ್ಟು ಪ್ರಚಾರ–ಅಪಪ್ರಚಾರಗಳ ಮೂಲಕ ಕಾರ್ಮಿಕರ ಐಕ್ಯತೆಯನ್ನು ಛಿದ್ರಗೊಳಿ ಸುತ್ತಾರೆ ಮತ್ತು ಸುಲಿಯುವ ಆಳುವ ದೊರೆ ಗಳಿಗೆ ತಮ್ಮನ್ನು ತಾವೇ ಅರ್ಪಿಸಿಕೊಳ್ಳುವಂತೆ ಅಸಹಾಯಕರನ್ನಾಗಿಸುತ್ತಾರೆ.

ಎಲ್ಲಿಯ ತನಕ ದಲಿತರು; ಶೋಷಿತರು; ಶ್ರಮ ಜೀವಿಗಳ ನಡುವೆ ವಿಶ್ವಾಸ; ಭ್ರಾತೃತ್ವ; ಸಂಘಟನೆ ಒಂದು ಶಕ್ತಿಯಾಗಿ ಬೆಳೆದು ನಿಲ್ಲುವುದಿಲ್ಲವೋ ಅಲ್ಲಿ ತನಕ ಮಧ್ಯಮವರ್ಗ ತನ್ನ ಗೊಂದಲ ದಿಂದಾಗಿ ಮೇಲೆ ಹೇಳಿದ ವರ್ಗ ಮಿತ್ರರ ಜೊತೆ ಸಹಕರಿಸುವುದಕ್ಕಿಂತ ಹೆಚ್ಚಾಗಿ ವಂಚಿಸುತ್ತಲೇ ಮುಂದುವರಿಯುತ್ತದೆ. ಇದು ತಿಳಿದೋ ತಿಳಿ ಯದೆಯೋ ಅಥವಾ ಪರಿಸ್ಥಿತಿಯ ಒತ್ತಡ ದಿಂದಲೋ ಆಗಿರಬಹುದು.

ಕ್ರಾಂತಿ ಅತಂತ್ರ ಸ್ಥಿತಿಯನ್ನು ನಿರ್ಮಾಣ ಮಾಡುತ್ತದೇನೋ ನಿಜ. ಆದರೆ ಅಧಿಕಾರವನ್ನು ಚಲಾಯಿಸುವವರು ಸಂಘಟಿತ ಕ್ರಾಂತಿ ಪುರುಷ ರಾದ ಶ್ರಮ ಜೀವಿಗಳೆಂಬುದೂ ನಿಜ. ಈ ಜವಾಬ್ದಾರಿಯನ್ನು ಶ್ರಮ ಜೀವಿ ವರ್ಗಕ್ಕೆ ಮನವ

ರಿಕೆ ಮಾಡಿಕೊಡದೆ ಕ್ರಾಂತಿಯೂ ಆಗುವುದಿಲ್ಲ ವೆಂಬುದೂ ಅಷ್ಟೇ ಸತ್ಯ. ವ್ಯಕ್ತಿ-ವೈಯಕ್ತಿಕ ಜೀವನ ಕ್ರಮದಲ್ಲಿ, ವ್ಯವಹಾರದಲ್ಲಿ ಬದಲಾಗದೆ ಸಂಘ; ಸಂಘಟನೆ,ಪಕ್ಷಗಳಿಂದ ಕ್ರಾಂತಿಯನ್ನು ನಿರೀಕ್ಷಿಸುವುದು ಹುಚ್ಚಲ್ಲವೇ ?

ಇನ್ನು CPI ಮತ್ತು CPM ಗಳ ಬಗ್ಗೆ ನಾನು ಬರೆಯುವಂಥದ್ದೇನೂ ಇಲ್ಲ. ಇವು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಾಗಿರುವುದರಿಂದ ಇವುಗಳ ಬಗ್ಗೆ ಸಹಾಯ ಸಹಕಾರವೇನಿದ್ದರೂ ಸಮಯ, ಸಂದರ್ಭ,ಪರಿಸ್ಥಿತಿಯ ಮೇಲೆ ನಿರ್ಧಾರ ವಾಗುವಂಥದ್ದು.

ಅಸ್ಸಾಂ, ಪಂಜಾಬಿನಲ್ಲಿ ಅಮೇರಿಕ ಮಾತ್ರ ವಲ್ಲ, ದೇಶಿಯ ಕೋಮುವಾದಿಗಳು; ಆಳುವವರು ಎಲ್ಲರದ್ದೂ ಮಹತ್ತರವಾದ ಪಾತ್ರವಿದೆ ಎಂಬುದನ್ನೂ ಮರೆತರೆ...ನಾವು ಕೂಡ ಸಾಲಗಾರರು, ಜೀತಗಾರರು ಎಂಬುದನ್ನು ಮರೆತುಬಿಡುತ್ತೇವೆ; ಅಮೇರಿಕಾದ ಅಥವಾ ವಿದೇಶೀ ಕುಮ್ಮಕ್ಕಿಗೆ ಕಾರಣರಾದವರು ದೇಶಿಯ ಗುತ್ತೇದಾರಿಗಳು, ಆಳುವವರಲ್ಲವೇ ?

"ನಕ್ಸಲೀಯರನ್ನು ಬಡಪಂಥೀಯರು ಉಪಯೋಗಿಸಿಕೊಳ್ಳುವ ಸಾಧ್ಯತೆಗಳಿವೆ" ಎಂದು ಶ್ರೀಯುತರು ಎಚ್ಚರಿಸಿರುವುದು ತುಂಬಾ ಗಂಭೀರ ವಾದ ವಿಷಯವಾದರೂ....ನಕ್ಸಲೀಯರು ದಿಕ್ಕು ಗುರಿಯಿಲ್ಲದ, ಸ್ವಂತ ನಿಲುವು ಸಿದ್ಧಾಂತಗಳಿಲ್ಲದ ಅರಾಜಕವಾದಿಗಳಲ್ಲ ನಮ್ಮ ಗುರಿ,ನಮ್ಮ ಧ್ಯೇಯ, ಬಲ ಹಾಗೂ ಎಡ ಪಂಥೀಯರ ಬಗ್ಗೆ ನಮ್ಮ ನಿಲುವು ಸ್ಪಷ್ಟವಾಗೇ ಇದೆ.

ಇನ್ನು ಕ್ರಾಂತಿಯ ಬಗ್ಗೆ ಹೇಳುವುದಿದ್ದರೆ, ಕ್ರಾಂತಿ ಸಮಯ ಸಂದರ್ಭದ ಒತ್ತಡಕ್ಕೆ ಸಮಾಜ ದಲ್ಲಿ ನಡೆಯುವ ಒಂದು ಕ್ರಿಯೆಯೆ ವಿನಹ ಅದು ಇಂಥ ಘಳಿಗೆಯಲ್ಲೇ ನಡೆಯಲಿ ಎಂದು ನಡೆಸು ವಂಥದಲ್ಲ. ಸಮಾಜದಲ್ಲಿ ನಡೆಯುವಪ್ರತಿಯೊಂದು ಪ್ರಗತಿಪರ ಹೋರಾಟಗಳೂ ಕ್ರಾಂತಿಯ ಆರಂಭ ದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವ ತರಬೇತಿ ಶಿಬಿರವಾಗುತ್ತದೆ. ಯಾರು ಬೇಡವೆಂದರೂ ಅದು ನಿಲ್ಲಲಾರದು. ಅದನ್ನು ಸರಿಯಾದ ದಾರಿ ಯಲ್ಲಿ ಮುನ್ನಡೆಸಿ ನವ ಸಮಾಜ ನಿರ್ಮಾಣದ ಗುರಿಯತ್ತ ಕೊಂಡೊಯ್ಯುವ ಮಹತ್ತರವಾದ ಪಾತ್ರ ಮಾತ್ರ ನೈಜ ಕ್ರಾಂತಿಕಾರಿಗಳದ್ದಾಗುತ್ತದೆ. ಇಲ್ಲಿ ಜನ ಶಕ್ತಿಯ ಮುಂದೆ ಯಾವ ಕೋಮುವಾದ ಗಳಾಗಲೀ, ಹೀರೋಗಳಾಗಲೀ; ಬಲ ಪಂಥ ಸಿದ್ಧಾಂತಗಳಾಗಲೀ ಉಳಿಯಲಾರವು. ಯಾವ ದಮನ ದಬ್ಬಾಳಿಕೆಗೂ ತಲೆ ಬಾಗಲಾರವು.

ಇನ್ನು ಕಮ್ಯುನಿಷ್ಟರ ಕರ್ತವ್ಯದ ಬಗ್ಗೆ ಶ್ರೀಯುತರ ಮಾತನ್ನು ಆಕ್ಷೇಪಿಸಿದರೆ ತಪ್ಪಾಗಲಾರದೆನಿಸುತ್ತದೆ. ಮಾವೋರವರ ಮಾತಲ್ಲಿ ಹೇಳುವುದಿದ್ದರೆ "ನೀರಿನಿಂದ ಮೇಲೆತ್ತಿದ ಮೀನು ಹೇಗೆ ಜೀವಂತವಾಗಿರಲಾರದೋ ಹಾಗೇ ನೇ ಕ್ರಾಂತಿಕಾರಿಯೂ ಜನರಿಂದ ದೂರ ಉಳಿದರೆ ಆತನೂ ನಿರ್ನಾಮವಾಗುತ್ತಾನೆ". ಕಮ್ಯೂನಿಷ್ಟ ನಿರಲಿ, ನಕ್ಸಲೀಯನಿರಲಿ, ಸಮಾಜವಾದಿಗಳಿರಲಿ ಎಲ್ಲಿ ತನಕ ಜನರ ಮಧ್ಯೆ ಬೆರತು, ಜನರ ಸಮಸ್ಯೆ ಗಳನ್ನು ಅರಿತುಕೊಂಡು, ಸಮಸ್ಯೆಗೆ ಉತ್ತರ ನೀಡಲು ಅಥವಾ ಹೋರಾಟಕ್ಕೆ ತಯಾರಿ ನಡೆಸಲು ಅಣಿಯಾಗುವುದಿಲ್ಲವೋ, ಎಲ್ಲಿ ತನಕ ವೈಯಕ್ತಿಕ ವಾದ; ಹೀರೊಯಿಸಂನ್ನು ತೊರೆದು ಜನರ ಕಷ್ಟ, ಸುಖಗಳನ್ನು ಹಂಚಿಕೊಂಡು ಬದುಕಲು ಇಷ್ಟಪಡು ವುದಿಲ್ಲವೋ ಅಲ್ಲಿ ತನಕ ವ್ಯಕ್ತಿಯನ್ನು, ಸಿದ್ಧಾಂತ ವನ್ನು ಜನ ಸಂಶಯದಿಂದಲೇ ನೋಡುತ್ತಾರೆ ಮತ್ತು ಹೋರಾಟದಿಂದ ದೂರವಾಗುತ್ತಾರೆ.

ನಕ್ಸಲೀಯರು ಅರಾಜಕವಾದಿಗಳಲ್ಲ.

—ರಮೇಶ್

ಹೆಸರಿನ ಆಸೆ: ಅಂಬೇಡ್ಕರ್‌ಗೆ ಮಸಿ

ಮಾನ್ಯರೇ

ಆಗಸ್ಟ್ ೨೮ರಂದು ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಮೈಸೂರಿನ ಅಶೋಕಪುರಂ ಉದ್ಯಾನ ವನದಲ್ಲಿ ಡಾ॥ ಅಂಬೇಡ್ಕರ್ ಅವರ ಶಿಲಾ ಪ್ರತಿಮೆಯನ್ನು ಅನಾವರಣ ಮಾಡಿದ್ದು ಸಂತೋಷದ ವಿಷಯ.

ಅನಾವರಣ ಮಹೋತ್ಸವ ಮುಗಿದಿತ್ತು ನಾನು ಈ ಕೃತಿಯನ್ನು ನೋಡಲು ಹೋದಾಗ. ಅಲ್ಲಿ ಕೆಲವಾರು ಅಭಿಮಾನಿಗಳು ಆ ಪ್ರತಿಮೆಯನ್ನು ಸುತ್ತುವರಿದು ನೋಡುತ್ತಿದ್ದರು. ಅವರಲ್ಲಿ ಒಬ್ಬಾತ "ಶಿಲ್ಪಿ ಬಸವಣ್ಣ-ಮೈಸೂರು" ಎಂದು ಓದಿಕೊಂಡು ವ್ಯಂಗ್ಯವಾಗಿ ನಕ್ಕ. ಆತನ ನಗುವಿಗೆ ಕಾರಣವೂ ಇತ್ತು.

ಅಂಬೇಡ್ಕರ್ ಶಿಲ್ಪ ಮೂರ್ತಿಯ ಮುಂದೆ ದೊಡ್ಡ ಅಕ್ಷರಗಳಲ್ಲಿ "ಶಿಲ್ಪಿ ಬಸವಣ್ಣ-ಮೈಸೂರು" ಎಂಬುದೇ ಎದ್ದು ಕಾಣುವಂತೆ ಕೆತ್ತಲಾಗಿದೆ. ಇದರ ಕೆಳಭಾಗದಲ್ಲಿ ಡಾ॥ ಅಂಬೇಡ್ಕರ್ ಹೆಸರು ಕೆತ್ತಲಾಗಿದೆ. ಶಿಲ್ಪಿ ಹೆಸರು ಮೇಲೆ ಅಂಬೇಡ್ಕರ್ ಹೆಸರು ಕೆಳಗೆ ! ಇದು ಅಂಬೇಡ್ಕರ್ ಘನತೆಗೆ ಹೋಗಲಿ ಶಿಲ್ಪಕೃತಿಗೇ ತಕ್ಕುದಲ್ಲ.

ಯಾವುದೇ ಶಿಲ್ಪ ಕೃತಿಯಲ್ಲೂ ಅದನ್ನು ರೂಪಿಸಿದ ಶಿಲ್ಪಿಯ ಹೆಸರು ಸಾಮಾನ್ಯವಾಗಿ ಆ ಕೃತಿಯ ಹಿಂಭಾಗದಲ್ಲಿ ನಮೂದಿಸಲಾಗುತ್ತದೆ. ಅದೂ ಕಂಡೂ ಕಾಣದಂತೆ. ಆದರೆ ಶಿಲ್ಪಿ ಬಸವಣ್ಣನವರ ಹೆಸರೇ ಪ್ರಮುಖವಾಗಿ ಪ್ರಧಾನವಾಗಿ ಎಲ್ಲರ ಕಣ್ಣು ಕುಕ್ಕುವಂತೆ ಕಾಣುವಂತಿದ್ದು ಶಿಲ್ಪ ಕೃತಿ ಪ್ರತಿಷ್ಠಾಪನೆಯ ಮೂಲ ಉದ್ದೇಶವೇ ಮಾಯವಾದಂತಾಗಿದೆ. ಇದರ ತಪ್ಪಿನ ಅರಿವು ಶ್ರೀ ಹೆಗಡೆ ಮತ್ತಿತರ ಗಣ್ಯರಿಗೂ ಆಗಿರಲು ಸಾಧ್ಯ. ಆದರೆ ಆಗಿ ಹೋಗಿರುವ ಕೆಲಸಕ್ಕೆ ಶಿಲ್ಪಿಯ ಅನಗತ್ಯ ಹೆಸರಿನ ಆಸೆಗೆ ಮೌನ ತಾಳಿರಲು ಸಾಧ್ಯ.

ಈಗಲಾದರೂ ಶಿಲ್ಪಿಗಳು ತಾವೇ ತಮ್ಮ ತಪ್ಪನ್ನು ಅರ್ಥಮಾಡಿಕೊಂಡು ತಮ್ಮ ಹೆಸರನ್ನು ಹಿಂಬದಿಗೆ ಬರುವಂತೆ ಮಾಡುವುದೂ ಉಚಿತವೂ ಸಾಧ್ಯವೂ ಇದೆ. ಇಲ್ಲವಾಗರೆ ಸಾಮಾನ್ಯ ಜನ ಆ ಶಿಲ್ಪ ಕೃತಿಯ ವ್ಯಕ್ತಿ ಬಸವಣ್ಣ ಎಂದೇ ಓದಿಕೊಂಡು ಅಪಹಾಸ್ಯ ಮಾಡುವಂತಾಗುತ್ತದೆ. ಇದು ಆಗಬಾರದು. ಶಿಲ್ಪಿಯ ಬಗ್ಗೆ ನನಗೆ ಗೌರವ ಇರುವಂತೆ ಮಹಾಪುರುಷ ಅಂಬೇಡ್ಕರ್ ಬಗ್ಗೆಯೂ ಹೆಚ್ಚಿನ ಗೌರವ ಇದೆ. ಆದರಿಂದಾಗಿ ಈ ನೊಂದ ನುಡಿಗಳು.

—ಪಿ. ಆರ್. ತಿಪ್ಪೇಸ್ವಾಮಿ ಕಲಾವಿದ
ಸದಸ್ಯ: ಲಲಿತಕಲಾ ಅಕಾಡೆಮಿ
ಮೈಸೂರು-೧

ಅತ್ಯುತ್ತಮ ಲೇಖನ, ಆದರೆ....

ಸೆ. 5, 84ರ ಪಂಚಮ ಪತ್ರಿಕೆಯಲ್ಲಿ ಬಂದ ಶ್ರೀ ಪಿ. ಜಿ. ವಿಜು ಪೂಣಚ್ಚರವರ ವಿಶೇಷಲೇಖನ ಕೊಡಗಿನ ದಲಿತರ ಬೆವರು ಮತ್ತು ರಕ್ತದಾಹದ ಬಗ್ಗೆ ಅತ್ಯುತ್ತಮ ಲೇಖನ. ಲೇಖನಕರಿಗೆ ವಂದನೆಗಳು. ಆದರೆ ಲೇಖಕರು ಎಲ್ಲಾ ಮೂಲಗಳನ್ನು ಕೆದಕಿ, ತೋಟದೊಡೆಯರು ಈ ದಲಿತ ಜನರನ್ನು ಹೇಗೆ ಪೋಲೀಸರಿಗೆ, ಕೋರ್ಟಿಗೆ ಸಿಕ್ಕಿಸಿ ತಾವು ಮೋಜು ತೀರಿಸಿಕೊಂಡು ನಾಟಕವಾಡುತ್ತಾರೆ ಎಂಬುದನ್ನು ಚಿತ್ರಿಸಲ್ಲ. ಬಹುಶಃ ಇದು ಚಿತ್ರಿಸಿದ್ದರೆ ಇನ್ನೂ ಪರಿಪೂರ್ಣವಾದ ಲೇಖನ ಇದು ಆಗುತ್ತಿತ್ತು. ಆದರೂ ಸಹ ಈ ಲೇಖನ ಅತ್ಯುತ್ತಮ ಲೇಖನ.

—ಹೆಚ್. ರಾಮಕೃಷ್ಣ
ವಿರಾಜಪೇಟೆ

'ಪಂಚಮ ಬಳಗ'ದ ಸದಸ್ಯರಾಗಿರಿ 'ಪಂಚಮ' ಪತ್ರಿಕೆ ಉಚಿತ ಪಡೆಯಿರಿ

ಪ್ರೀತಿಯ ಪಂಚಮ ಓದುಗ ಬಂಧುಗಳೆ,

ತಮ್ಮೆಲ್ಲರ ಚಿಂತನೆ ನೋವು ನಲಿವುಗಳಿಗೆ ಸ್ಪಂದಿಸುತ್ತಾ ಕಳೆದ 8 ವರ್ಷಗಳಿಂದ ಸಮಾಜದ ನೊಂದವರೆಲ್ಲರ ಮುಖವಾಣಿಯಾಗಿ ಹೊರಬರುತ್ತಿರುವ 'ಪಂಚಮ' ಪತ್ರಿಕೆಯು ಈಗ ಓದುಗರಿಗೆ ಹೊರೆಯಾಗದಂತ ಹೊಸ ಯೋಜನೆಯೊಂದನ್ನು ರೂಪಿಸಿದೆ.

ಅದೇನೆಂದರೆ,

ಆಸಕ್ತ ಓದುಗರು ನೂರು (100–00) ರೂಪಾಯಿಯನ್ನು ಪಂಚಮಕ್ಕೆ ಕೊಡುವುದರ ಮೂಲಕ 'ಪಂಚಮ ಬಳಗದ' ಸದಸ್ಯರಾಗವುದು. ಈ ನೂರು ರೂಪಾಯಿಯನ್ನು ಪಂಚಮ ತನ್ನ ವೆಚ್ಚಕ್ಕೆ ಬಳಸುವುದಿಲ್ಲ. ಬದಲಿಗೆ ಈ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟು ಇದರಿಂದ ಬರುವ ಬಡ್ಡಿಯ ಹಣವನ್ನು ಮಾತ್ರ ಪಂಚಮವು ತನ್ನ ವೆಚ್ಚಕ್ಕೆ ಬಳಸುವುದು. ಒಂದು ಪಕ್ಷ ಪಂಚಮವು ನಿಂತು ಬಿಟ್ಟರೆ ಈ ನೂರು ರೂಪಾಯಿಯನ್ನು ಸದಸ್ಯರಿಗೆ ಹಿಂದಿರುಗಿಸಲಾಗುವುದು.

ಇಂಥ ಯೋಜನೆಯಿಂದ 'ಪಂಚಮ ಬಳಗ'ದ ಸದಸ್ಯರಾದವರಿಗೆ ಪಂಚಮ ಪತ್ರಿಕೆಯನ್ನು ಪಂಚಮ ಬದುಕಿರುವವರೆಗೆ ಉಚಿತವಾಗಿ ಕಳುಹಿಸಲಾಗುವುದು. ಹಾಗೂ ಇದರಿಂದಾಗಿ ಆರ್ಥಿಕವಾಗಿ ಬಳಲುತ್ತಿರುವ ಪಂಚಮಕ್ಕೆ ಒಂದು ಗಟ್ಟಿ ಆರ್ಥಿಕ ನೆಲೆ ದೊರಕಿದಂತಾಗುವುದು.

ಇಂಡಿಯಾದ ರಾಜಕೀಯದಲ್ಲಿ ಬದಲಾವಣೆಯ ಹೊಸ ಆಶೆಯಂತೆ ಬೆಳೆಯುತ್ತಿರುವ ದಲಿತ ಚಳುವಳಿ ಹಾಗೂ ಮೂರನೆ ಜಗತ್ತಿನ ನೊಂದ ಜನಸ್ತೋಮದ ನೋವು ನಲಿವು ಸಾಹಿತ್ಯ ಕಲೆ ಹೋರಾಟಗಳ ಬಗ್ಗೆ ಸಹಚಿಂತನೆ, ಕುತೂಹಲ, ಆಸ್ತೆ ಇರುವ ಎಲ್ಲರೂ ಪಂಚಮ ಬಳಗದ ಸದಸ್ಯರಾಗಬಹುದು.

ಸದಸ್ಯರಾಗಬಯಸುವವರು 100ರೂಪಾಯಿಯನ್ನು ಎಂ. ಓ. ಅಥವಾ ಡಿ.ಡಿ. ಮೂಲಕ **ಸಂಪಾದಕ, 'ಪಂಚಮ' 407, 14ನೇ ಮೈನ್, ಸರಸ್ವತೀಪುರಂ, ಮೈಸೂರು 570009**—ಈ ವಿಳಾಸಕ್ಕೆ ಕಳುಹಿಸಬೇಕೆಂದು ಕೋರುತ್ತೇವೆ.

ಸದಸ್ಯರಾದವರ ಹೆಸರುಗಳನ್ನು ಆಯಾ ಸದಸ್ಯರ ಇಚ್ಛೆಯ ಮೇರೆಗೆ ಆಯಾ ಪಂಚಮ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಪಂಚಮ ಬಳಗಕ್ಕೆ ಸೇರಿರಿ, ಎಂದು ಕೋರುವ—

ನಿಮ್ಮ
ದೇವನೂರ ಮಹಾದೇವ
ವ್ಯವಸ್ಥಾಪಕ ಸಂಪಾದಕ
ಪಂಚಮ ಪತ್ರಿಕೆ

ಪಂಚಮ

407, 14ನೇ ಮೈನ್, ಸರಸ್ವತಿಪುರಂ, ಮೈಸೂರು–570009

ಪಂಚಮ ಬಳಗ

1 ಟಿ. ದೇವದಾಸ್, ಮಂಗಳೂರು
2 ಎಸ್. ಜೋಗಯ್ಯ, ಮಂಡ್ಯಾ
3 ಸಿದ್ಧಭೈರಯ್ಯ, ಹೆಗ್ಗಡದೇವನಕೋಟೆ
4 ಶ್ರೀರಂಗಯ್ಯ, ಚಾಮರಾಜನಗರ
5 ಎನ್. ಎಸ್. ಪುಷ್ಪಾ, ಮೈಸೂರು
6 ಸಿ. ಪಿ. ಸುನೀತ, ಮೈಸೂರು

(ಇವರೆಲ್ಲ ಈಗಾಗಲೆ ಪಂಚಮದ ಆಜೀವ ಸದಸ್ಯರಾಗಿರುವರು)

ನಮ್ಮ ಕರೆಗೆ ಓಗೊಟ್ಟು ಈ ಸಂಚಿಕೆ ಸಮಯಕ್ಕೆ 100 ರೂಪಾಯಿ ಕಳಿಸಿ ಪಂಚಮ ಬಳಗದ ಸದಸ್ಯರಾದವರು :

7 ಸೇನಾನಿ ಕೇ. ಹೆಗ್ಡೆ
8 ಶಿವಶಂಕರಯ್ಯ, ಮೈಸೂರು
9 ವಿಜಯಕುಮಾರ್, ಮೈಸೂರು
10 ಪ್ರಭಾಕರ್, ಸೋಮವಾರಪೇಟೆ
11 ಎ. ಬಿ. ಭೋಜಪ್ಪ, ಸೋಮವಾರಪೇಟೆ
12 ವಿಪಕಂತ, ಗುಂಡ್ಲುಪೇಟೆ
13 ಶಿವರಾಮಯ್ಯ, ಬೆಂಗಳೂರು
14 ಎಂ. ಸಿ. ಸುಂದ್ರೇಶನ್, ಮೈಸೂರು
15 ಜಿ. ಸಿ. ಶೇಖರ್, ಮೈಸೂರು
16 ವಸಂತಪ್ರಭಾಕರ್, ಮೈಸೂರು
17 ಬಿ. ಎಸ್. ಗುರುಸಿದ್ದಯ್ಯ, ಕುಶಾಲನಗರ
18 ಎಲ್. ರವೀಂದ್ರ, ಮೈಸೂರು

ತಮ್ಮನ್ನೆಲ್ಲ 'ಪಂಚಮ ಬಳಗಕ್ಕೆ' ಸ್ವಾಗತಿಸುವ
ದೇವನೂರ ಮಹಾದೇವ
ವ್ಯವಸ್ಥಾಪಕ ಸಂಪಾದಕ

ಆಯ್ಕೆ ನಿಮ್ಮದು

ಪಂಚಮದ ವಾರ್ಷಿಕ ಚಂದಾ : 20 ರೂಪಾಯಿ.
20 ರೂ. ಕೊಟ್ಟು ವಾರ್ಷಿಕ ಚಂದಾದಾರರಾಗಿರಿ
ಅಥವಾ
ಪಂಚಮ ಬಳಗದ ಸದಸ್ಯರಾಗಿ, ಪಂಚಮ ಪತ್ರಿಕೆಯನ್ನು ಉಚಿತವಾಗಿ ಪಡೆಯಿರಿ.

ಸಂಪಾದಕ, ಪ್ರಕಾಶಕ, ಮುದ್ರಕ: ಗೋವಿಂದಯ್ಯ, ಮಹೇಶ್ವರ ಮುದ್ರಣಾಲಯ, 407, 14ನೇ ಮೈನ್, ಸರಸ್ವತಿಪುರಂ, ಮೈಸೂರು-5700 09